# ಮಾಹಿತಿ ಹಕ್ಕು

# ಅಧಿನಿಯಮ 2005

# ರಡಿ 4(1)(ಬಿ)

# ಉತ್ತರ ಕನ್ನಡ

# ಕಾರವಾರ ಜಿಲ್ಲೆ

## ಅಧ್ಯಾಯನ –1

ಸಾರ್ವಜನಿಕ ಸಂಸ್ಥೆಯ ಕರ್ತವ್ಯಗಳು ಮತ್ತು ಪ್ರಕಾರಗಳು.

[ಭಾಗ 4(1)(ಬಿ)(i)]

ಸಾರ್ವಜನಿಕ ಸಂಸ್ಥೆಯ ಕರ್ತವ್ಯ ಮತ್ತು ಪ್ರಕಾರಗಳ ವಿವರ

| ಕ್ರ ಸಂ. | ಸಂಸ್ಥೆಯ ಹೆಸರು | ವಿಳಾಸ | ಪ್ರಕಾರಗಳು | ಕರ್ತವ್ಯಗಳು |
|---|---|---|---|---|
| | ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ ಉತ್ತರ ಕನ್ನಡ ಕಾರವಾರ | ಸಹಾಯಕ ನಿರ್ದೇಶಕರ ಕಛೇರಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಎಮ್ ಜಿ ರೋಡ, ಕಾರವಾರ | | ಕೇಂದ್ರ ರಾಜ್ಯ ಮತ್ತು ಜಿಲ್ಲಾ ವಲಯ ಯೋಜನೆಗಳನ್ನು ಕ್ರಮಬದ್ದವಾಗಿ ಜವಳಿ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸುವುದು.<br>ಕ್ಷೇತ್ರ ಮಟ್ಟದಲ್ಲಿ ನೇಕಾರರಿಗೆ ಕೈಮಗ್ಗ ವಿದ್ಯುತ್ ಮಗ್ಗ ಮತ್ತು ಸಿದ್ದ ಉಡುಪು ವಲಯದಲ್ಲಿರುವ ಅವಕಾಶಗಳ ಬಗ್ಗೆ ವ್ಯಾಪಕ ಪ್ರಚಾರ ನೀಡಿ ಕಾರ್ಯಕ್ರಮಗಳ ಅನುಷ್ಠಾನ. |

## ಅಧ್ಯಾಯನ –2

ಸಾರ್ವಜನಿಕ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ನೌಕರರ ಅಧಿಕಾರ ಹಾಗೂ ಕರ್ತವ್ಯಗಳು

[ಭಾಗ 4(1)(ಬಿ)(ii)]

ಸಾರ್ವಜನಿಕ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಮತ್ತು ನೌಕರರ ವ್ಯಾಪ್ತಿಯಲ್ಲಿರುವ ಅಧಿಕಾರಿ ಮತ್ತು ಕರ್ತವ್ಯಗಳನ್ನು ದಯವಿಟ್ಟು ಒದಗಿಸಿ

| ಕ್ರ ಸಂ. | ಅಧಿಕಾರಿ/ನೌಕರರ ಹೆಸರು | ಹುದ್ದೆ | ನಿರ್ವಹಿಸಬೇಕಾದ ಕರ್ತವ್ಯಗಳು | ಅಧಿಕಾರಗಳು |
|---|---|---|---|---|
| 1 | ಶ್ರೀ ದಯಾನಂದ ಕೆ. ಪಿ | ಸಹಾಯಕ ನಿರ್ದೇಶಕರು (ಪ್ರಭಾರ) | ಜಾಬ್ ಚಾರ್ಟ್ ಪ್ರಕಾರ ಕೆಳಕಂಡಂತೆ ವಿವರಿಸಿದೆ. | ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಪ್ರದತ್ತವಾದ ಹಾಗೂ ಕಾಲಕ್ಕೆ ಸರ್ಕಾರದಿಂದ ಹೊರಡಿಸುವ ಆದೇಶ ಮತ್ತು ಸುತ್ತೋಲೆಗಳಂತೆ |
| 2 | ಶ್ರೀ ದಯಾನಂದ ಕೆ. ಪಿ | ಜವಳಿ ಪ್ರವರ್ಧನಾಧಿಕಾರಿ | | |

**ಸಹಾಯಕ ನಿರ್ದೇಶಕರು:**

1. ನೇಕಾರರಿಗೆ ಹಾಗೂ ಜವಳಿ ಕೈಗಾರಿಕೆಗಳಿಗೆ ಅಗತ್ಯವಿರುವ ಆರ್ಥಿಕ ಸೌಲಭ್ಯಗಳನ್ನು ಒದಗಿಸಲು ಯೋಜನೆಗಳನ್ನು ರೂಪಿಸುವುದು.
2. ಮಾರುಕಟ್ಟೆ ಸಹಾಯ ಮತ್ತು ಗುಣಮಟ್ಟ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನ ನೀಡುವುದು.
3. ಜಿಲ್ಲೆಯ ನೇಕಾರರನ್ನು ಗುರುತಿಸುವುದು ಮತ್ತು ಸಮೀಕ್ಷೆ. ನೇಕಾರರನ್ನು ನೇಕಾರರ ಸಹಕಾರ ಸಂಘಗಳಲ್ಲಿ ಸದಸ್ಯರಾಗಲು ಪ್ರೋತ್ಸಾಹ ಹಾಗೂ ಸೂಕ್ತ ಮಾರ್ಗದರ್ಶನ ನೀಡುವುದು.
4. ಸಿದ್ಧ ಉಡುಪು/ಜವಳಿ ನೀತಿಯನ್ವಯ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವುದು.
5. ಜವಳಿ ಕೈಗಾರಿಕೆಗಳ ಅಭಿವೃದ್ದಿಗೆ ಪೂರಕವಾದ ಉದ್ಯಮಶೀಲತಾ ತರಬೇತಿ ಕಾರ್ಯವನ್ನು ಹಮ್ಮಿಕೊಳ್ಳುವುದು ಹಾಗೂ ಯೋಜನೆಗಳ ಬಗ್ಗೆ ಅಗತ್ಯ ಮಾಹಿತಿ ನೀಡುವುದರೊಂದಿಗೆ ಉದ್ಯಮಶೀಲರನ್ನು ಪ್ರೋತ್ಸಾಹಿಸುವುದು, ಅಲ್ಲದೆ ಸಂಶೋಧನೆ, ವಿಸ್ತರಣೆ ಕಾರ್ಯಕ್ರಮಗಳಿಗೆ ಉತ್ತೇಜಿಸುವುದು.
6. ಉದ್ದಿಮೆಗಳ ಅಭಿವೃದ್ಧಿಯಲ್ಲಿ ತೊಡಗುವ ಸಲುವಾಗಿ ಅಭಿವೃದ್ಧಿ ನಿಗಮ/ಮಂಡಳಿಗಳು/ಹಣಕಾಸು ಸಂಸ್ಥೆಗಳು, ಸಹಕಾರಿ ಸಂಘಗಳು/ತರಬೇತಿ ಕೆಂದ್ರಗಳ ಜೊತೆಗೆ ಪರಿಣಾಮಕಾರಿ ಸಮನ್ವಯ ಇರಿಸುವುದು.
7. ಸಣ್ಣ/ಅತಿಸಣ್ಣ ಕೈಗಾರಿಕೆಗಳ ವಿಕೇಂದ್ರೀಕರಣ ಮತ್ತು ಸಮತೋಲನದ ಬೆಳವಣಿಗೆಗೆ ಸೂಕ್ತಕಾರ್ಯಕ್ರಮ ರೂಪಿಸುವುದು
8. ನೇಕಾರರ ಕೌಶಲ್ಯ, ಉತ್ಪನ್ನಗಳ ಗುಣಮಟ್ಟ, ಉತ್ಪಾದಕತೆ ಹೆಚ್ಚಿಸುವಲ್ಲಿ ಮಾರ್ಗದರ್ಶನ ನೀಡುವುದು.
9. ಉದ್ಯಶೀಲತಾಭಿವೃದ್ಧಿ ಕಾರ್ಯಕ್ರಮಗಳು, ವಿಚಾರಗೋಷ್ಠಿ ಕಾರ್ಯಾಗಾರ,ಸಮ್ಮೇಳನ ಮತ್ತು ಪ್ರದರ್ಶನಗಳ ಏರ್ಪಾಡು ಮಾಡುವುದರೊಂದಿಗೆ ಜಿಲ್ಲೆಯ ಜವಳಿ ಉದ್ದಿಮೆ ಉತ್ಪನ್ನಗಳ ಬಗ್ಗೆಸಾರ್ವಜನಿಕರಿಗೆ ಪರಿಚಯ ಮಾಡಿಸುವುದು.
10. ಜವಳಿ ಉದ್ದಿಮೆಗಳ ಅಭಿವೃದ್ಧಿಗಾಗಿ ಸ್ಥಾಪಿಸಲಾದಂತಹ ಮೂಲಭೂತ ಸೌಕರ್ಯ ಒದಗಿಸುವ ಬಗ್ಗೆ ಪ್ರಮುಖ ಪಾತ್ರವನ್ನು ವಹಿಸುವುದು.
11. ಜಿಲ್ಲಾ ಜವಳಿ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಯೋಜನಾ ಸಮಿತಿ, ಜಿಲ್ಲಾ ಸಮನ್ವಯ ಸಮಿತಿ ಮತ್ತು ಬ್ಯಾಂಕ್‌ಗಳ ಹಣಕಾಸು ಸಂಸ್ಥೆಗಳೊಂದಿಗೆ ಸಮನ್ವಯ ಇರಿಸುವುದು.
12. ಆಸಕ್ತ ಉದ್ದಿಮೆದಾರರನ್ನು ಗುರುತಿಸಿ, ಉದ್ದಿಮೆ ಸ್ಥಾಪನೆ ಮಾಡಲು ಮಾರ್ಗದರ್ಶನ ನೀಡುವುದು.
13. ಜವಳಿ ಕೈಗಾರಿಕೆ ಘಟಕಗಳ ಗಣತಿ ಮತ್ತು ಮಾದರಿ ಸಮೀಕ್ಷೆಗಳನ್ನು ಸಮಕಾಲೀನಗೊಳಿಸುವುದು.
14. ಜವಳಿ ಕೈಗಾರಿಕೆ ಅಭಿವೃದ್ಧಿ ಹಾಗೂ ನೇಕಾರರಿಗೆ ಸಂಬಂಧಿಸಿದ ಮಾಹಿತಿ ಒದಗಿಸುವುದು.
15. ರಫ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವುದು.
16. ನಿರುದ್ಯೋಗಿಗಳಿಗೆ ಜವಳಿ ಕ್ಷೇತ್ರದಲ್ಲಿ ಸ್ವ-ಉದ್ಯೋಗ ಯೋಜನೆಯಡಿ ಸಾಲ ಮಂಜೂರು ಮಾಡಲು ಬ್ಯಾಂಕ್‌ಗಳಿಗೆ ಶಿಫಾರಸ್ಸು ಮಾಡುವುದು.
17. ನಿಗದಿತ ಅವಧಿಯೊಳಗೆ ಮಾಸಿಕ ವರದಿಗಳನ್ನು/ಮಾಹಿತಿಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸುವುದು.
18. ಜವಳಿಕೈಗಾರಿಕಾ ಘಟಕಗಳಿಗೆ ಲಭ್ಯವಿರುವ ಸರ್ಕಾರದ ಯೋಜನೆಗಳ ಸೌಲಭ್ಯಗಳನ್ನು ಮಂಜೂರು ಮಾಡಲು ಜವಳಿ ಕೈಗಾರಿಕಾ ಘಟಕಗಳ ಪ್ರಸ್ತಾವನೆಗಳನ್ನು ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರಿಗೆ ಶಿಫಾರಸ್ಸುಮಾಡುವುದು
19. ರಾಷ್ಟ್ರೀಯ ಸಣ್ಣ ಕೈಗಾರಿಕೆ ನಿಗಮಗಳಿಂದ ಬಾಡಿಗೆ-ಖರೀದಿ ಯೋಜನೆಯಲ್ಲಿ ಯಂತ್ರೋಪಕರಣಗಳನ್ನು ಪಡೆಯಲು ಸಣ್ಣ/ಅತಿ ಸಣ್ಣ ಜವಳಿ ಕೈಗಾರಿಕಾ ಘಟಕಗಳ ಅರ್ಜಿ ಶಿಫಾರಸ್ಸು ಮಾಡುವುದು.
20. ವಿಶೇಷ ಘಟಕ ಯೋಜನೆ/ಗಿರಿಜನ ಉಪಯೋಜನೆಯನ್ವಯ ಜವಳಿ ಕೈಗಾರಿಕೆ ಅಭಿವೃದ್ಧಿ ಹಾಗೂ ನೇಕಾರರ ಅಭಿವೃದ್ಧಿಗೆ ಕಾರ್ಯಕ್ರಮ ರೂಪಿಸಿ, ಅನುಷ್ಠಾನಗೊಳಿಸುವುದು
21. ನೇಕಾರರ ಕೌಶಲ್ಯಅಭಿವೃದ್ದಿ ತರಬೇತಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.
22. ಜಿಲ್ಲೆಯಲ್ಲಿರುವ ಇತರೆ ಇಲಾಖೆಗಳೊಂದಿಗೆ ಸಮನ್ವಯವಿರಿಸುವುದು.
23. ಜಿಲ್ಲಾವಲಯ ಯೋಜನೆಯ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತಂತೆ ಜಿಲ್ಲೆಗಳ/ತಾಲ್ಲೂಕುಗಳಲ್ಲು ಕ್ರಿಯಾ ಯೋಜನೆಯನ್ನು ರೂಪಿಸಿ, ಅನುಷ್ಠಾನಗೊಳಿಸುವುದು.
24. ಜಿಲ್ಲಾ ವಲಯ ವಿಶೇಷ ಘಟಕ ಯೋಜನೆ/ಗಿರಿಜನ ಉಪಯೋಜನೆಯ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತಂತೆ ಜಿಲ್ಲೆಗಳ/ತಾಲ್ಲೂಕುಗಳಲ್ಲಿ ಕ್ರಿಯಾ ಯೋಜನೆಯನ್ನು ರೂಪಿಸಿ, ಅನುಷ್ಠಾನಗೊಳಿಸುವುದು.
25. ನೇಕಾರರ ಸಾಮಾಜಿಕ ಭದ್ರತಾ ಯೋಜನೆಗಳ ಅನುಷ್ಠಾನ.
26. ಕೇಂದ್ರ ವಲಯದ ಎಲ್ಲಾ ಯೋಜನೆಗಳನ್ನು ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸುವುದು.
27. ಇಲಾಖಾ ಮುಖ್ಯಸ್ಥರ ಸೂಚನೆಯಂತೆ ಕಾರ್ಯ ನಿರ್ವಹಿಸುವುದು.

**ಜವಳಿ ಪ್ರವರ್ಧನಾಧಿಕಾರಿಗಳ ಕಾರ್ಯನಿರ್ವಹಣಾ ಪಟ್ಟಿ:**

1. ಜಿಲ್ಲೆಯ ನೇಕಾರರನ್ನು ಗುರುತಿಸುವುದು ಮತ್ತು ಸಮೀಕ್ಷೆ ಮಾಡುವುದು.
2. ನೇಕಾರರನ್ನು ನೇಕಾರರ ಸಹಕಾರ ಸಂಘಗಳಲ್ಲಿ ಸದಸ್ಯರಾಗಲು ಪ್ರೋತ್ಸಾಹ ಹಾಗೂ ಸೂಕ್ತ ಮಾರ್ಗದರ್ಶನ ನೀಡುವುದು.
3. ನೇಕಾರರನ್ನು ಸಂಘಟಿಸಿ, ನೇಕಾರರ ಸಹಕಾರ ಸಂಘಗಳನ್ನು ರಚಿಸಲು ಮಾರ್ಗದರ್ಶನ ನೀಡುವುದು.
4. ಜವಳಿ ಕೈಗಾರಿಕೆಗಳ ಘಟಕ ಗಣತಿ ಮತ್ತು ಮಾದರಿ ಸಮೀಕ್ಷೆಗಳನ್ನು ಸಮಕಾಲೀನಗೊಳಿಸುವುದು.
5. ಸಿದ್ಧಉಡುಪು ವಲಯದ ಅಭಿವೃದ್ಧಿ, ಘಟಕಗಳ ಸ್ಥಾಪನೆ ಹಾಗೂ ತರಬೇತಿ ಸಂಬಂಧಿಸಿದಂತೆ ಅನುಷ್ಠಾನ ಗೊಳಿಸುವುದು.
6. ಸಿದ್ಧ ಉಡುಪು ನೀತಿಯನ್ವಯ ವಿವಿಧ ಯೋಜನೆಗಳ ಅನುಷ್ಠಾನದಲ್ಲಿ ಸಂಪೂರ್ಣವಾಗಿ ತೊಡಗಿಸಿ ಮೇಲಿನ ಅಧಿಕಾರಿಗಳಿಗೆ ಸಹಕರಿಸುವುದು.
7. ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸಹಕರಿಸುವುದು.
8. ನೇಕಾರರಿಗೆ, ಉದ್ದಿಮೆದಾರರಿಗೆ ಸೂಕ್ತವಾದ ಯೋಜನೆಗಳನ್ನು ಆಯ್ಕೆ ಮಾಡುವಲ್ಲಿ ಯೋಜನಾ ವರದಿ ತಯಾರಿಸುವಲ್ಲಿ ಸೂಕ್ತ ನೆರವು ನೀಡುವುದು.
9. ನೇಕಾರರಿಗೆ ನೇಕಾರರ ಸಹಕಾರ ಸಂಘಗಳ ಮೂಲಕ ದೊರಕಬಹುದಾದಂತಹ ಸೌಲಭ್ಯಗಳ ಬಗ್ಗೆ ಮಾರ್ಗದರ್ಶನ ನೀಡುವುದು.
10. ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಂದ ನೇಕಾರರು ಸಣ್ಣ ಮತ್ತು ಅತೀ ಸಣ್ಣ ಪ್ರಮಾಣದ ಜವಳಿ ಕೈಗಾರಿಕೆ ಗಳಿಗೆ ದೊರೆಯಬಹುದಾದ ಸಾಲ ಸೌಲಭ್ಯಗಳ ಬಗ್ಗೆ ಮಾರ್ಗದರ್ಶನ ಮತ್ತು ನೆರವು ನೀಡುವುದು.
11. ಉದ್ದಿಮೆ ಸ್ಥಾಪನೆ ಮತ್ತು ಬೆಳವಣಿಗೆಗೆ ಪ್ರಚಾರ ಗೋಷ್ಠಿಗಳು, ವಿಚಾರ ಸಂಕಿರಣ, ವಸ್ತು ಪ್ರದರ್ಶನ, ಉದ್ಯಮ ಶೀಲತಾಭಿವೃದ್ಧಿ ಕಾರ್ಯಕ್ರಮ ಹಾಗೂ ಕಾರ್ಯಾಗಾರಗಳನ್ನು ಏರ್ಪಾಡು ಮಾಡುವುದು.
12. ಜವಳಿ ಕೈಗಾರಿಕಾವೃದ್ಧಿಯಲ್ಲಿ ತೊಡಗಿರುವ ವಿವಿಧ ನಿಗಮ/ಮಂಡಳಿ/ಪ್ರಾಧಿಕಾರ ಹಾಗೂ ವಿವಿಧ ಸಂಘಸಂಸ್ಥೆ ಗಳಿಂದ ನಡೆಸಲಾಗುವಂತಹ ವಿವಿಧ ರೀತಿಯಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಸೂಕ್ತ ನೆರವು ನೀಡುವುದು
13. ನೇಕಾರರಿಗೆ, ನೇಕಾರರ ಸಂಘಗಳಿಗೆ, ಜವಳಿ ಕೈಗಾರಿಕೆಗಳಿಗೆ ನೀಡಲಾದಂತಹ ವಿವಿಧ ಸಾಲಗಳ ವಸೂಲಾತಿ ಬಗ್ಗೆ ನೆರವು ನೀಡುವುದು.
14. ಜವಳಿ ಕೈಗಾರಿಕೆಗಳನ್ನು ಸ್ಥಾಪಿಸಲು ಬರುವಂತಹ ಉದ್ದಿಮೆದಾರರಿಗೆ, ಸಂಬಂಧಪಟ್ಟ ಸಂಸ್ಥೆಗಳಮುಖಾಂತರ ನಿವೇಶನಗಳನ್ನು ಒದಗಿಸಲು ಸೂಕ್ತವಾದ ನೆರವು ಹಾಗೂ ಮಾರ್ಗದರ್ಶನ ನೀಡುವುದು.
15. ಸರ್ಕಾರದಿಂದ ಜವಳಿ ಕೈಗಾರಿಕೆಗಳಿಗೆ ದೊರಕಬಹುದಾದ ಪ್ರೋತ್ಸಾಹ, ಉತ್ತೇಜನ ಮತ್ತು ರಿಯಾಯಿತಿಗಳ ಸೌಲಭ್ಯವನ್ನು ಒದಗಿಸಿಕೊಡುವಲ್ಲಿ ನೆರವು ನೀಡುವುದು.
16. ತಾಲ್ಲೂಕು ಮಟ್ಟದ ಮಾಸಿಕ ಕೆ.ಡಿ.ಪಿ. ಸಭೆ/ತ್ರೈಮಾಸಿಕ ಬ್ಯಾಂಕರ್ ಸಭೆ ಹಾಗೂ ಗ್ರಾಮ ಸಭೆಗಳಲ್ಲಿ ಹಾಜರಾಗುವುದು.
17. ತಾಲ್ಲೂಕು ಮಟ್ಟದ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಹಾಗೂ ಇತರೆ ಅಭಿವೃದ್ಧಿ ಕಾರ್ಯಕ್ರಮದ ಅಂಕಿ– ಅಂಶಗಳ ಮಾಹಿತಿ ನಿರ್ವಹಿಸುವುದು.
18. ರೋಗಗ್ರಸ್ಥ ಸಣ್ಣ ಪ್ರಮಾಣದ ಜವಳಿ ಕೈಗಾರಿಕಾ ಘಟಕಗಳ ಪುನಃಶ್ಚೇತನಕ್ಕೆ ನೆರವು ನೀಡುವುದು.
19. ಜಿಲ್ಲಾ ಮಟ್ಟದ ಇಲಾಖೆಯ ಅಧಿಕಾರಿಗಳು ವಹಿಸುವಂತಹ ಎಲ್ಲಾ ಕೆಲಸ ಕಾರ್ಯಗಳ ನಿರ್ವಹಣೆ.

## ಅಧ್ಯಾಯ– 3
## ಸಾರ್ವಜನಿಕ ಸಂಸ್ಥೆಗಳಲ್ಲಿರುವ ಅಧಿಕಾರಿಗಳು ನಿರ್ಧಾರ ತೆಗೆದುಕೊಳ್ಳಬೇಕಾದಲ್ಲಿ ಅನುಸರಿಸಬೇಕಾದ ನಿಯಮಗಳು.

### [ಭಾಗ 4(1) (ಬಿ) (iii)]
### ಸಾರ್ವಜನಿಕ ಸಂಸ್ಥೆಗಳಲ್ಲಿ ಲಭ್ಯವಿರುವ ಅಧಿಕಾರದ ವ್ಯಾಪ್ತಿಯಲ್ಲಿ ಕೈಗೊಳ್ಳಬೇಕಾದ ನಿರ್ಧಾರದಲ್ಲಿ ಅನುಸರಿಸಬೇಕಾದ ನಿಯಮಗಳು.

| ಕ್ರ. ಸಂ. | ಚಟುವಟಿಕೆಗಳು | ವಿವರಣೆ | ನಿರ್ಧಾರ ಕೈಗೊಳ್ಳುವ ವಿಧಾನದಲ್ಲಿ ಅನುಸರಿಬೇಕಾದ ನಿಯಮಗಳು | ಅಂತಿಮವಾಗಿನಿರ್ಧಾರ ಕೈಗೊಳ್ಳುವ ಅಧಿಕಾರಿ |
|---|---|---|---|---|
| 1 | | | | |
| **2** | ಮಹಾತ್ಮಗಾಂಧಿ ಬುನ್ಕರ್ ಬಿಮಾ ಯೋಜನೆ ಹಾಗೂ ಶಿಕ್ಷ ಸಹಯೋಗ ಯೋಜನೆ | ಕೈಮಗ್ಗ ನೇಕಾರರು ವಾರ್ಷಿಕ ಪ್ರೀಮಿಯಂ ಮೊತ್ತ ' 40/–ಗಳನ್ನು ಪಾವತಿಸಿ (ಏಪ್ರಿಲ್ ನಿಂದ ಮಾರ್ಚ್) ಸದಸ್ಯತ್ವವನ್ನು ಹೊಂದಬಹುದಾಗಿರುತ್ತದೆ. ವಿಮಾ ಅವಧಿಯಲ್ಲಿ ಮೃತ ನೇಕಾರರ ವಾರಸುದಾರರಿಗೆ ಸಂದುವ ವಿಮಾ ಮೊತ್ತ ಈ ಮುಂದಿನಂತಿದೆ.<br>1. ಸ್ವಾಭಾವಿಕ ಮರಣ ರೂ.60,000<br>2. ಅಪಘಾತದಿಂದ ಮರಣ ರೂ.1,50,000<br>3. ಅಪಘಾತದಿಂದ ಭಾಗಶಃ ಅಂಗವಿಕಲತೆ ರೂ.75,000<br>4. ಅಪಘಾತದಿಂದ ಪೂರ್ಣ ಅಂಗವಿಕಲತೆ ರೂ.1,50,000<br>ಸದಸ್ಯ ನೇಕಾರರ ಇಬ್ಬರು ಮಕ್ಕಳಿಗೆ 9ನೇ ತರಗತಿಯಿಂದ ದ್ವಿತೀಯ ಪಿ.ಯು.ಸಿ.ಯ ವರೆಗಿನ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ.1200/–ಗಳವಿದ್ಯಾರ್ಥಿವೇತನವನ್ನು ಪಡೆಯಲು ಅರ್ಹರಿರುತ್ತಾರೆ. | 1. ನೋಡಲ್ ಏಜೆನ್ಸಿ (ಎಲ್.ಐ.ಸಿ.)ಯಿಂದ ಪಡೆದ ನಿಗದಿತ ಅರ್ಜಿನ ಮೂನೆಯನ್ನು ಭರ್ತಿಮಾಡಿ, ಈ ಕಛೇರಿಗೆ ಸಲ್ಲಿಸಲು ಫಲಾನುಭವಿ ಗಳಿಗೆ ಸೂಚಿಸಲಾಗುವುದು.<br>2. ಸಹಕಾರ ಸಂಘಗಳ ಮುಖಾಂತರಅಥವಾ ಅಸಂಘಟಿತ ವಲಯದ ನೇಕಾರರಿಂದ ಪಡೆದ ಭರ್ತಿ ಮಾಡಿದ ಒಟುಚಿಜ ಅರ್ಜಿ ನಮೂನೆಗಳನ್ನು ಹಾಗೂ ಗುರುತಿನ ಚೀಟಿಗಳನ್ನು ಪಡೆದು ಅರ್ಹ ನೇಕಾರರನ್ನು ಯೋಜನೆಯಡಿ ಅಳವಡಿಕೆಗೆ ನೋಡಲ್ ಏಜೆನ್ಸಿಗೆ ಶಿಫಾರಸ್ಸು ಮಾಡಲು ಕೈಮಗ್ಗ ಕೇಂದ್ರ ಕಛೇರಿಗೆ ಕಳುಹಿಸಿಕೊಡಲಾಗುವುದು.<br>ವಿಮಾ ಪರಿಹಾರ ಮೊತ್ತ:<br>1. ವಿಮಾ ಪರಿಹಾರ ಮೊತ್ತವನ್ನು ಮಂಜೂರು ಮಾಡಲು ಅಗತ್ಯ ದಾಖಲಾತಿ ಗಳೊಂದಿಗೆ ಫಲಾನುಭವಿಗಳಿಂದ/ಮೃತ ನೇಕಾರರ ನಾಮಿನಿಗಳಿಂದ ಪ್ರಸ್ತಾವನೆ ಪಡೆದು ಸ್ಥಳ ಪರಿಶೀಲನೆ ಮಾಡಿ ಎಲ್.ಐ.ಸಿ.ಗೆ ಶಿಫಾರಸ್ಸು ಮಾಡಲು ಕೇಂದ್ರ ಕಚೇರಿಗೆ ಕಳುಹಿಸಿ ಕೊಡಲಾಗುವುದು.<br>2. ಎಲ್.ಐ.ಸಿ. ಸಂಸ್ಥೆಯವರು ಪ್ರಸ್ತಾವನೆ ಗಳನ್ನು ಪರಿಶೀಲಿಸಿ ವಿಮಾ ಪರಿಹಾರಮೊತ್ತ ವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ಖಿಖಿಉಖ ನಿಂದ ನೇರವಾಗಿ ಸಂದಾಯ ಮಾಡುತ್ತಾರೆ. | ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಉತ್ತರ ಕ್ನನಡ ಕಾರವಾರ |
| | | ವಿಮಾ ಸದಸ್ಯತ್ವ ಹೊಂದಿದ ನೇಕಾರರ ಇಬ್ಬರು ಮಕ್ಕಳಿಗೆ 9ನೇ ತರಗತಿಯಿಂದ ದ್ವಿತೀಯ ಪಿ.ಯು.ಸಿ.ಯ ವರೆಗೆ ರೂ.1200/–ಗಳ ವಿದ್ಯಾರ್ಥಿವೇತನವನ್ನು ಪಡೆಯಲು ಅರ್ಹರಿರುತ್ತಾರೆ. | ಕೇಂದ್ರ ಕಛೇರಿಯಿಂದ ಪ್ರಸಕ್ತ ಸಾಲಿಗೆ ಶಿಕ್ಷ ಸಹಯೋಗ ಯೋಜನೆಯಡಿ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಕರೆಯಲು ಪತ್ರ ಬಂದ ನಂತರ<br>1. ನೋಡಲ್ ಏಜೆನ್ಸಿ (ಎಲ್.ಐ.ಸಿ.)ಯಿಂದ ಪಡೆದ ನಿಗಧಿತ ಅರ್ಜಿ ನಮೂನೆಯನ್ನು ಭರ್ತಿಮಾಡಿ ಈ ಕಛೇರಿಗೆ ಸಲ್ಲಿಸಲು ಫಲಾನುಭವಿಗಳಿಗೆ ಸೂಚಿಸಲಾಗುವುದು.<br>2. ವಿದ್ಯಾ ಸಂಸ್ಥೆಯ ಮುಖ್ಯೋಪಧ್ಯಾಯರು /ಪ್ರಾಂಶುಪಾಲರಿಂದ ದೃಢೀಕರಿಸಿದ ಅರ್ಜಿಯನ್ನು ಅಗತ್ಯ ದಾಖಲಾತಿಗಳೊಂದಿಗೆ ಈ ಕಛೇರಿಗೆ ಸಲ್ಲಿಸಬೇಕು.<br>3. ಅರ್ಜಿಗಳನ್ನು ಸ್ವೀಕರಿಸಿ ನಂತರಪರಿಶೀಲಿಸಿ ಅರ್ಹ ಅರ್ಜಿಗಳನ್ನು ವಿದ್ಯಾರ್ಥಿವೇತನ ಮಂಜೂರು ಮಾಡಲು ಕೇಂದ್ರ ಕಛೇರಿಗೆ ಶಿಫಾರಸ್ಸು ಮಾಡಲಾಗುವುದು.<br>4. ಕೇಂದ್ರ ಕಛೇರಿಯಿಂದ ವಿದ್ಯಾರ್ಥಿವೇತನದ ಹಣ ಮಂಜೂರಾಗಿ ಬಂದ ಮೇಲೆ ಪ್ರತಿ ವಿದ್ಯಾರ್ಥಿಗಳ ಹೆಸರಿಗೆ ಚೆಕ್‌ನೀಡಲಾಗುವುದು. | ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ ಕಾರವಾರ |
| | | | | |
| | | | | |

| | | | | |
|---|---|---|---|---|
| 4 | ರಾಜ್ಯ ವಲಯ ವಸತಿ ಕಾರ್ಯಗಾರ | ಜಿಲ್ಲೆಯ ಕೈಮಗ್ಗ ಹಾಗೂ ವಿದ್ಯುತ್ ಮಗ್ಗ ನೇಕಾರರಿಗೆ ವಸತಿ ಕಾರ್ಯಾಗಾರ ನಿರ್ಮಿಸಲು ಸಾಮಾನ್ಯ ವರ್ಗದ ನೇಕಾರರಿಗೆ ಘಟಕ ವೆಚ್ಚ ರೂ.95,000/–, ಇದರಲ್ಲಿ ಸರ್ಕಾರದ ಸಹಾಯಧನ ರೂ.75,000/– ಸಾಲ ರೂ.20,000/– ಮತ್ತು ವಂತಿಕೆ ರೂ. 5000/– ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ನೇಕಾರರಿಗೆ ಘಟಕ ವೆಚ್ಚ ರೂ.1,00,000/–, ಇದರಲ್ಲಿ ಸರ್ಕಾರದ ಸಹಾಯಧನ ರೂ.90,000/– ಸಾಲ ರೂ. 10,000/–ಗಳಂತೆ ವಸತಿ ರಹಿತ ಹಾಗೂ ನೇಯ್ಗೆ ಚಟುವಟಿಕೆಗಳಲ್ಲಿ ತೊಡಗಿರುವ ಫಲಾನುಭವಿಗಳಿಗೆ ಅನುದಾನದ ಲಭ್ಯತೆ ಹಾಗೂ ವಾರ್ಷಿಕ ಗುರಿಯ ಆಧಾರದ ಮೇಲೆ ನಿರ್ಧರಿಸ ಲಾಗುವುದು. | ಕೇಂದ್ರ ಕಛೇರಿಯಿಂದ ಗುರಿ ನಿಗಧಿ ಪಡಿಸಿ ಪ್ರಸ್ತಾವನೆ ಕಳುಹಿಸಲು ಆದೇಶ ಬಂದನಂತರ<br>1) ಸಹಕಾರ ಸಂಘಗಳು ಕೆ.ಹೆಚ್.ಡಿ.ಸಿ ನೇಕಾರರು ಅಸಂಘಟಿತ ವಲಯದ ವಸತಿ ರಹಿತ ನೇಕಾರರಿಂದ ಅರ್ಜಿ ಪಡೆಯಲಾಗುವುದು.<br>2) ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯನ್ನು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಅವಶ್ಯಕತೆ ಗಳಿಗನುಗುಣವಾಗಿ ಆಯ್ಕೆ ಮಾಡಲಾಗುವುದು<br>3) ಆಯ್ಕೆ ಸಮಿತಿ ಸಭೆಯಲ್ಲಿ ಕೈಮಗ್ಗ ಮತ್ತು ಜವಳಿ ಉಪನಿರ್ದೇಶಕರ ಅಧ್ಯಕ್ಷತೆಯಲ್ಲಿ ಫಲಾನುಭವಿಗಳ ವಿವರಗಳ ನ್ನೊಳಗೊಂಡ ಪಟ್ಟಿಯನ್ನು ಮಂಡಿಸಿ ಅನುಮೋದನೆ ಪಡೆಯಲಾಗುವುದು<br>4) ಆಯ್ಕೆ ಸಮಿತಿಯಲ್ಲಿ ಅನುಮೋದನೆಗೊಂಡ ಫಲಾನುಭವಿಗಳಿಗೆ ವಸತಿ ಕಾರ್ಯಾಗಾರ ನಿರ್ಮಾಣಕ್ಕೆ ಮಂಜೂರಾತಿಯನ್ನು ನೀಡಲಾಗುವುದು<br>5) ಕಾಮಗಾರಿಯ ಪ್ರಗತಿಯನ್ನಾಧರಿಸಿ 3 ಹಂತಗಳಲ್ಲಿ ಹಣ ಬಿಡುಗಡೆ ಮಾಡಲಾ ಗುವುದು (ಮೊದಲನೇ ಕಂತು ಸಾಲವಾಗಿದ್ದು, ಉಳಿದಂತೆ 3 ಕಂತುಗಳು ಸಹಾಯಧನವಾಗಿರುತ್ತದೆ) | ಸಹಾಯಕ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ ಕಾರವಾರ |
| 5 | ನೇಕಾರರ ಮಿತವ್ಯಯ ನಿಧಿ ಯೋಜನೆ | ಕೈಮಗ್ಗ ನೇಕಾರರ ಮಿತವ್ಯಯ ನಿಧಿ ಯೋಜನೆಯಡಿ ನೇಕಾರರು ಗಳಿಸಿದ ಮಜೂರಿಯ ಮೇಲೆ ಶೇಕಡ 8ರಷ್ಟು ಸಂಗ್ರಹಣೆ ಮಾಡಿ ಸಮ ಪ್ರಮಾಣದ ಮೊತ್ತವನ್ನು ಸರ್ಕಾರದ ವಂತಿಕೆಯಾಗಿ ಪ್ರತಿ ನೇಕಾರರಿಗೆ ಮಂಜೂರು ಮಾಡಲಾಗುತ್ತದೆ. ನೇಕಾರರ ಖಾತೆಯಲ್ಲಿರುವ ಒಟ್ಟು ಮೊತ್ತಕ್ಕೆ ವಾರ್ಷಿಕ 12%ರಂತೆ ಮಂಜೂರು ಮಾಡಲಾಗುವುದು. | 1) ಕೆ.ಹೆಚ್.ಡಿ.ಸಿ/ನೇಕಾರ ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಕೈಮಗ್ಗ ಉದ್ಯೋಗ ಅವಲಂಬಿಸಿ ರುವ ನೇಕಾರರುಗಳ ಒಟ್ಟು ದುಡಿಮೆಯಲ್ಲಿ ಶೇ. 6ರಿಂದ 8ರಷ್ಟು ಹಣವನ್ನು ಕಟಾವಣೆ ಮಾಡಿ ಅಷ್ಟೇ ಮೊತ್ತದ ಹಣವನ್ನುಸರ್ಕಾರದ ಭಾಗಾಂಶವಾಗಿ ನೀಡಿ, ಬಡ್ಡಿ ಸಮೇತ 15 ವರ್ಷಗಳ ನಂತರ ನೇಕಾರರಿಗೆ ಹಿಂದಿರುಗಿಸ ಲಾಗುವುದು.<br>2) 15 ವರ್ಷಗಳ ನಂತರ ಅಗತ್ಯ ದಾಖಲಾತಿ ಗಳೊಂದಿಗೆ ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸುವುದು.<br>3) ಯೋಜನೆಯಡಿ ಚಂದಾದಾರರಾಗಿ 5 ವರ್ಷಗಳ ನಂತರ ಮಕ್ಕಳ ವಿದ್ಯಾಭ್ಯಾಸ, ವಿವಾಹ, ಗೃಹ ನಿರ್ಮಾಣಕ್ಕಾಗಿ ಭಾಗಶಃ ಮೊತ್ತದಲ್ಲಿ ಸಾಲ ಮುಂಗಡ ಪಡೆಯಬಹುದು | ಸಹಾಯಕ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ ಕಾರವಾರ |
| | | | 4) ದಾಖಲಾತಿಗಳನ್ನು ಪರಿಶೀಲಿಸಿ ನಿಗದಿತ ಮೊತ್ತಕ್ಕೆ ಬಿಲ್ಲನ್ನು ತಯಾರಿಸಿ ಖಜಾನೆ ಮೂಲಕ ಹಣ ಸೆಳೆಯಬಹುದು.<br>5) ಖಜಾನೆಯಿಂದ ಫಲಾನುಭವಿಗಳ ಹೆಸರಿಗೆ ಬಂದ ಚೆಕ್ಕನ್ನು ನೀಡುವುದು. | |
| 6 | ಜಿಲ್ಲಾ ವಲಯ ಯೋಜನೆ ಕೈಮಗ್ಗ ಉದ್ಯಮಿಗಳಿಗೆ ಸಹಾಯಧನ/ ಸಹಕಾರ ಸಂಘ ಗಳಿಗೆ ಶೇರು ಬಂಡವಾಳ. | ಸಹಕಾರ ಸಂಘಗಳಿಗೆ ಷೇರು ಬಂಡವಾಳ ಹೂಡಿಕೆ, ದುಡಿಮೆ ಬಂಡವಾಳ ಸುಧಾರಿತ ಕೈಮಗ್ಗ ಮತ್ತು ಉಪಕರಣಗಳನ್ನು ಸಂಘದಲ್ಲಿ ನೋಂದಾಯಿತ ಹಾಗೂ ನೇಯ್ಗೆಯಲ್ಲಿ ತೊಡಗಿರುವ ಸದಸ್ಯರಿಗೆ ಒದಗಿಸಲಾಗುವುದು. | ಜಿಲ್ಲಾ ಪಂಚಾಯತ್‌ನಿಂದ ಹಂಚಿಕೆಯಾದ ಅನುದಾನ.<br>1) ಕ್ರಿಯಾಯೋಜನೆ ತಯಾರಿಸಿ ಜಿಲ್ಲಾ ಪಂಚಾಯತ್‌ಗೆ ಅನುಮೋದನೆಗಾಗಿ ಸಲ್ಲಿಸಲಾಗುವುದು.<br>2) ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಹಾಗೂ ಸಾಮಾನ್ಯ ಸ್ಥಾಯಿ ಸಮಿತಿಗಳಲ್ಲಿ ಅನುಮೋದನೆ ಪಡೆದು ಆಡಳಿತಾತ್ಮಕ ಅನುಮೋದನೆಗಾಗಿ ಸಿ.ಇ.ಓ. ಜಿಲ್ಲಾ ಪಂಚಾಯತ್ ಇವರಿಗೆ ಅನುಮೋದನೆಗಾಗಿ ಸಲ್ಲಿಸುವುದು<br>3) ಅನುಮೋದನೆ ನಂತರ ಸಂಘಗಳಿಂದ ಪ್ರಾಥಮಿಕ ದಾಖಲಾತಿಗಳನ್ನು ಪಡೆದು ಸಹಕಾರ ಸಂಘಗಳಿಗೆ ಮಂಜೂರಾತಿ ಆದೇಶ ನೀಡಲಾಗುವುದು. | ಸಹಾಯಕ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ ಕಾರವಾರ |

| | | | | |
|---|---|---|---|---|
| | | | 4) ಮಂಜೂರಾದ ಮೊತ್ತಕ್ಕೆ ಬಿಲ್ಲನ್ನು ತಯಾರಿಸಿ ಖಜಾನೆಗೆ ಸಲ್ಲಿಸಿ, ಮೊತ್ತವನ್ನು ಸೆಳೆದು, ಸಹಕಾರ ಸಂಘಗಳಿಂದ ಪೂರ್ಣ ದಾಖಲಾತಿಗಳನ್ನು ಪಡೆದು ಸಂಘಕ್ಕೆ ಹಣ ಬಿಡುಗಡೆ ಮಾಡಲಾಗುವುದು. | |
| 7 | ನೂತನ ಜವಳಿ ನೀತಿ ಯೋಜನೆಯಡಿ ಸಿದ್ಧ ಉಡುಪು ತರಬೇತಿ/ ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪನೆ/ ಬಂಡವಾಳ ಹೂಡಿಕೆ ಸಹಾಯಧನ. | ನೂತನ ಜವಳಿ ನೀತಿ ಯೋಜನೆಯಡಿ–ಗ್ರಾಮೀಣ ನಿರುದ್ಯೋಗ ಜನತೆಗೆ ಉದ್ಯೋಗ ಸೃಜಿಸುವುದು ಕೇಂದ್ರೀಕೃತ ಸಿದ್ದ ಉಡುಪು ವಲಯವನ್ನು ಹಿಂದುಳಿದ ಪ್ರದೇಶ, ಜಿಲ್ಲಾಕೇಂದ್ರಗಳು ತಾಲ್ಲೂಕು ಕೇಂದ್ರಗಳಲ್ಲಿ ಸ್ಥಾಪಿಸಲಾಗಿರುತ್ತದೆ.<br>1. ಪಾಲಿಸಿ ಅವಧಿ: 1/4/2013ರಿಂದ 31/03/2018ರ ವರೆಗೆ.<br>2. ರಾಜ್ಯದಲ್ಲಿ ಹೊಸದಾಗಿ ಸ್ಥಾಪಿಸಲ್ಪಡುವ ಸಿದ್ದ ಉಡುಪು ಘಟಕ, ಎಂಬ್ರಾಯಿಡರಿ,ವಿದ್ಯುತ್‌ಮಗ್ಗ ಘಟಕ, ಕೈಮಗ್ಗ ಘಟಕ, ಟೆಕ್ನಿಕಲ್ ಟೆಕ್ಸ್‌ಟೈಲ್ಸ್,ಸ್ಪಿನ್ನಿಂಗ್ ಮಿಲ್ಸ್, ನಿಟ್ಟಿಂಗ್ ಮತ್ತು ಟೆಕ್ಸ್‌ಟೈಲ್ಸ್ ಯಂತ್ರೋಪಕರಣ ತಯಾರಿಕಾ ಘಟಕಗಳಿಗೆ ಸುವರ್ಣ ವಸ್ತ್ರನೀತಿಯಡಿ ಪ್ರೋತ್ಸಾಹನ ಮತ್ತು ಉತ್ತೇಜನಗಳನ್ನು ನೀಡಲಾಗುತ್ತಿದೆ. | 1. ತರಬೇತಿ: ಕೇಂದ್ರ ಕಛೇರಿಯಿಂದ ಗುರಿ ನಿಗಧಿ ಪಡಿಸಿದ ನಂತರ<br>1)ಫಲಾನುಭವಿಗಳಿಂದ ಅರ್ಜಿ ಸ್ವೀಕರಿಸುವುದು<br>2) ಆಯ್ಕೆ ಸಮಿತಿಯಲ್ಲಿ ಅರ್ಹ ಫಲಾನುಭವಿ ಗಳ ಆಯ್ಕೆ ಮಾಡಿ ಸಿದ್ಧ ಉಡುಪು ಘಟಕ ಗಳಿಗೆ ಅನುಗುಣವಾಗುವಂತೆ ಹೈಸ್ಪೀಡ್ ಹೊಲಿಗೆ ಯಂತ್ರಗಳ ಮೇಲೆ ಹೊಲಿಗೆ ತರಬೇತಿ, ಕಸೂತಿ, ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ಮೇಲೆ ತರಬೇತಿ ನೀಡಿ ಉದ್ಯೋಗ ಅವಕಾಶ ನೀಡುವುದು.<br>2. ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪನೆ:<br>ಅ). 1) ಆಸಕ್ತ ಫಲಾನುಭವಿಗಳಿಂದ ಯೋಜನಾ ವರದಿಯನ್ನು ಪಡೆಯುವುದು.<br>2) ವರದಿಯನ್ನು ಪರಿಶೀಲಿಸಿ ಸ್ಥಳ ಪರಿಶೀಲನೆ ನಡೆಸಿ ಕೇಂದ್ರ ಕಛೇರಿಗೆ ಶಿಫಾರಸ್ಸುಮಾಡುವುದು<br>3) ಎಸ್.ಎಲ್.ಪಿ.ಐ.ಸಿ ಸಭೆಯಲ್ಲಿ ಅನುಮೋದನೆ ಪಡೆದು,ಕೇಂದ್ರ ಕಛೇರಿಯಿಂದ ಕೌಶಾಲ್ಯಾಭಿವೃದ್ದಿ ಕೇಂದ್ರಕ್ಕೆ ಮಂಜುರಾತಿ ನೀಡುವುದು. | ಸಹಾಯಕ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ ಕಾರವಾರ |
| | | ಅ. ಪ್ರೋತ್ಸಾಹನ ಮತ್ತು ಉತ್ತೇಜನಗಳು– ಬಂಡವಾಳ ಸಹಾಯಧನ, ಶೇ.15ರಿಂದ 20ರವರೆಗೆ<br>ಆ. ವಿದ್ಯುತ್‌ಚ್ಛಕ್ತಿ ಸಹಾಯಧನ – ಪ್ರತಿ ಯೂನಿಟ್‌ಗೆ ರೂ.1/–ರಂತೆ<br>ಇ. ಪ್ರವೇಶ ತೆರಿಗೆ ಸಹಾಯಧನ– ಶೇ. 100ರಷ್ಟು ಮರುಪಾವತಿ<br>ಉ. ಮುದ್ರಾಂಕ ಶುಲ್ಕ– ಶೇ.50ರಿಂದ 100ರಷ್ಟು<br><br>ಊ. ಅಕ್ರಿಡಿಯೇಷನ್ ರೂ.2/–ಲಕ್ಷಗಳ ವರೆಗೆ<br>ಋ. ಭೂ ಹಂಚಿಕೆ/ಅಕ್ವಿಜಿಷನ್ ವೆಚ್ಚ– ಶೇ.25ರಷ್ಟು<br>ಎ. ಡಿಸೈನ್ ಡೆವಲಪ್‌ಮೆಂಟ್ ಮಾರ್ಕೆಟಿಂಗ್– ಶೇ.50ರಷ್ಟು ಅಥವಾ ಗರಿಷ್ಠ ರೂ.50/– ಲಕ್ಷ<br>ಏ. ಮೆಘಾ ಪ್ರಾಜೆಕ್ಟ್– ರೂ.100/– ಕೋಟಿ ಬಂಡವಾಳ ಹೂಡಿಕೆ ಮತ್ತು 500 ಜನರಿಗೆ ಉದ್ಯೋಗ<br>ಏ. ಹೊಸ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ ಸ್ಥಾಪನೆ (ಎಸ್.ಡಿ.ಸಿ) ಅನುದಾನ: ರೂ. 30/– ಲಕ್ಷ<br>ಐ. ತರಬೇತಿ ಸಂಸ್ಥೆ ಪಾತ್ರ – ಕನಿಷ್ಠ 1500 ಚದರ ಅಡಿ ಕಟ್ಟಡ, ವಿದ್ಯುತ್ ಸಂಪರ್ಕ ಹೊಂದಿರಬೇಕು.<br>ಒ. ಮಾನವ ಸಂಪನ್ಮೂಲ ಸೃಜನೆ 10000 ಕೋಟಿ ಬಂಡವಾಳ ಆಕರ್ಷಣೆ. 5 ಲಕ್ಷ ಉದ್ಯೋಗ. | 4) ಕೌಶಲ್ಯಾಭಿವೃದ್ಧಿ ಕೇಂದ್ರಕ್ಕೆ ಯಂತ್ರೋಪಕರಣ ಖರೀದಿಸಲು ಕೇಂದ್ರ ಕಛೇರಿಯಿಂದ ಅನುಮೋದನೆ ಪಡೆದು ಟೆಂಡರ್ ಕರೆಯುವುದು<br><br>5) ಆಯ್ಕೆ ಸಮಿತಿಯಲ್ಲಿ ಟೆಂಡರ್ ತೆರೆದು ಸರಬರಾಜುದಾರರಿಗೆ ಯಂತ್ರೋಪಕರಣ ಸರಬರಾಜು ಮಾಡಲು ಆದೇಶ ನೀಡಿ, ಸರಬರಾಜಿನ ಮೇಲೆ ಹಣ ಬಿಡುಗಡೆ ಮಾಡಲಾಗುವುದು.<br>3) ಬಂಡವಾಳ ಹೂಡಿಕೆ ಸಹಾಯಧನ:<br>1) ಜವಳಿ ಘಟಕಗಳಿಂದ ಪ್ರಸ್ತಾವನೆ ಪಡೆದು, ಪರಿಶೀಲಿಸಿ ಘಟಕಕ್ಕೆ ಭೇಟಿ ನೀಡುವುದು.<br>2) ಅರ್ಹ ಘಟಕವಾದಲ್ಲಿ ಕೇಂದ್ರ ಕಛೇರಿಗೆ ಶಿಫಾರಸ್ಸು ಮಾಡುವುದು.<br>3) ನಂತರ ಎಸ್.ಎಲ್.ಪಿ.ಐ.ಸಿ ಸಭೆಯಲ್ಲಿ ಅನುಮೋದನೆ ಪಡೆದು, ಕೇಂದ್ರ ಕಛೇರಿಯಿಂದ ಘಟಕಕ್ಕೆ ಸಹಾಯಧನವನ್ನು ಮಂಜೂರು ಮಾಡಿ ಬಿಡುಗಡೆ ಮಾಡಲಾಗುವುದು. | ಸಹಾಯಕ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ ಕಾರವಾರ |
| 8 | ನೇಕಾರರ ವಿಶೇಷ ಪ್ಯಾಕೇಜ್‌ಯೋಜನೆ | ವಿದ್ಯುತ್ ಮಗ್ಗ ಘಟಕಗಳಿಗೆ/ಮಗ್ಗ ಪೂರ್ವ ಘಟಕಗಳಿಗೆ ರಿಯಾಯ್ತಿ | ವಿದ್ಯುತ್‌ಮಗ್ಗ ನೇಕಾರರಿಗೆ ತಮ್ಮ ಉತ್ಪಾದನಾ ವೆಚ್ಚ ಕಡಿಮೆ ಮಾಡುವ ಉದ್ದೇಶದಿಂದ | ಸಹಾಯಕ ನಿರ್ದೇಶಕರು ಕೈಮಗ್ಗ ಮತ್ತು ಜವಳಿ |

| | | | | |
|---|---|---|---|---|
| | ಯಡಿ ವಿದ್ಯುತ್ ಮಗ್ಗ ನೇಕಾರರಿಗೆ ವಿದ್ಯುತ್ ಸಬ್ಸಿಡಿ | ದರದಲ್ಲಿ ವಿದ್ಯುತ್‌ನ್ನು ಪ್ರತಿ ಯುನಿಟ್‌ಗೆ ರೂ.1.25 ದರದಲ್ಲಿ 20 ಹೆಚ್.ಪಿ.ಯ ವರೆಗೆ ಪೂರೈಸಲಾಗುತ್ತಿದೆ. | 1) ನೇಕಾರರ ಘಟಕಗಳಿಂದಕಾಲೋನಿಗಳಿಂದ ಅರ್ಜಿ ಪಡೆದು ಘಟಕದ ಸ್ಥಳ ಪರಿಶೀಲನೆ ಮಾಡಿ ಹೆಸ್ಕಾಂಗೆ ಶಿಫಾರಸ್ಸು ಮಾಡ ಲಾಗುವುದು.<br>2) ಹೆಸ್ಕಾಂನಿಂದ ನೇಕಾರರ ವಿದ್ಯುತ್‌ಬಿಲ್ಲನ್ನು ಆಧರಿಸಿ ವಿದ್ಯುತ್ ಸರಬರಾಜು ಕಂಪನಿಗೆ ನೇರವಾಗಿ ಹಣ ಬಿಡುಗಡೆಮಾಡಲಾಗುವುದು | ಇಲಾಖೆ, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ ಕಾರವಾರ |
| | ನೇಕಾರರಿಗೆ 02 ವಿದ್ಯುತ್ ಮಗ್ಗ ಖರೀದಿಸಲು ಸಹಾಯಧನ | ಕೈಮಗ್ಗ ನೇಕಾರರಿಗೆ 02 ವಿದ್ಯುತ್ ಮಗ್ಗಗಳನ್ನು ಖರೀದಿಸಲು ಸಾಮಾನ್ಯ ವರ್ಗದವರಿಗೆ ಶೇ 50 ರಷ್ಟು ಅಥವಾ ಗರಿಷ್ಟ ರೂ. 1.00 ಲಕ್ಷ ಸಹಾಯಧನ/ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಶೇ 90 ರಷ್ಟು ಸಹಾಯಧನ ಒದಗಿಸಲಾಗುವುದು | 1) ಕೈಮಗ್ಗ ನೇಕಾರಿಕೆಯಿಂದ ವಿದ್ಯುತ್ ಮಗ್ಗಕ್ಕೆ ಪರಿವರ್ತನೆ ಹೊಂದ ಬಯಸುವ ಸಂಘಟಿತ/ ಅಸಂಘಟಿತ ಹಾಗೂ ಕೆ.ಹೆಚ್.ಡಿ.ಸಿ ಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೇಕಾರರನ್ನು ಆಯ್ಕೆ ಮಾಡಲಾಗುವುದು.<br>2) ಫಲಾನುಭವಿಗಳು ತಮ್ಮ ವಂತಿಕೆಯನ್ನು ಬ್ಯಾಂಕಿನಿಂದ ಸಾಲದ ಮೂಲಕ ಭರಿಸಲು ಶಖ್ಯರಿರಬೇಕು ಮತ್ತು ಅಗತ್ಯ ವಿದ್ಯುತ್ ಸಂಪರ್ಕ ಹೊಂದಿರತಕ್ಕದ್ದು | ಸಹಾಯಕ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ |
| 9 | ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ರಾಜ್ಯ ಶೇ. 20ರ ಸರ್ಕಾರದ ರಿಬೇಟ್ | ಕೈಮಗ್ಗ ಸಹಕಾರ ಸಂಘಗಳಿಗೆ, ಅಪೆಕ್ಸ್ ಸಂಸ್ಥೆ ಮತ್ತು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಕೈಮಗ್ಗ ಉತ್ಪನಗಳ ಮಾರಾಟದ ಮೇಲೆ ಶೇ.20 ರಿಬೇಟ್ ಮೊತ್ತವನ್ನು ನೀಡಲಾಗುತ್ತದೆ. ವಾರ್ಷಿಕ 135 ದಿನ ಅನುಮೋದಿಸಿ ನಿರ್ದಿಷ್ಟಪಡಿಸಿದ ದಿನಗಳ ಮಾರಾಟದ ಮೇಲೆ. | ನೇಕಾರ ಸಹಕಾರ ಸಂಘಗಳವರು ಮಾರಾಟ ಮಾಡಿದ ಕೈಮಗ್ಗ ಉತ್ಪನ್ನಗಳನ್ನು ವಿವಿಧ ಕೈಮಗ್ಗ ಮಾರಾಟ ಮೇಳಗಳು ಹಾಗೂ ಸಂಘದ ಮುಖಾಂತರ ರಿಬೇಟ್ ಅವಧಿಯಲ್ಲಿ ಮಾಡಿದ ಒಟ್ಟು ಮಾರಾಟದ ಮೇಲೆ ಶೇ.20 ರಿಯಾಯಿತಿ ಸಹಾಯಧನ ಪ್ರಸ್ತಾವನೆ ಪಡೆದು ಕೇಂದ್ರ ಕಛೇರಿಗೆ ಶಿಫಾರಸ್ಸು ಮಾಡಲಾಗುವುದು. | ಸಹಾಯಕ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ ಕಾರವಾರ |
| 10 | ವಿದ್ಯುತ್‌ಮಗ್ಗ ನೇಕಾರರಿಗೆ ಗುಂಪು ವಿಮಾ ಯೋಜನೆಯಡಿ ಅಳವಡಿಕೆ (ಜನಶ್ರೀಬಿಮಾ ಯೋಜನೆ) | ವಿದ್ಯುತ್ ನೇಕಾರರು ಪ್ರೀಮಿಯಂ ಮೊತ್ತ ರೂ. 80/-ಗಳನ್ನು ಪಾವತಿಸಿ ವಾರ್ಷಿಕ ಸದಸ್ಯತ್ವವನ್ನು ಹೊಂದಬಹುದಾಗಿರುತ್ತದೆ. ವಿಮಾ ಅವಧಿಯಲ್ಲಿ ಮೃತ ನೇಕಾರರ ವಾರಸುದಾರರಿಗೆ ಸಂದುವ ವಿಮಾ ಮೊತ್ತ ಈ ಮುಂದಿನಂತಿದೆ.<br>1. ಸ್ವಾಭಾವಿಕ ಮರಣ ರೂ.60,000<br>2. ಅಪಘಾತದಿಂದ ಮರಣ ರೂ.1,50,000<br>3. ಅಪಘಾತದಿಂದ ಭಾಗಶಃ ಅಂಗವಿಕಲತೆ ರೂ. 75,000<br>4. ಅಪಘಾತದಿಂದ ಪೂರ್ಣ ಅಂಗವಿಕಲತೆ ರೂ.1,50,000<br>ಸದಸ್ಯ ನೇಕಾರರ ಇಬ್ಬರು ಮಕ್ಕಳಿಗೆ 9ನೇ ತರಗತಿಯಿಂದ ದ್ವಿತೀಯ ಪಿ.ಯು.ಸಿ. ಯವರೆಗಿನ ವಿದ್ಯಾರ್ಥಿ ಗಳಿಗೆ ರೂ.1200/-ಗಳ ವಿದ್ಯಾರ್ಥಿ ವೇತನವನ್ನು ಪಡೆಯಲು ಅರ್ಹರಿರುತ್ತಾರೆ | 1. ನೋಡಲ್ ಏಜೆನ್ಸಿ (ಎಲ್.ಐ.ಸಿ.)ಯಿಂದ ಪಡೆದ ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಸಲ್ಲಿಸಲು ಫಲಾನುಭವಿಗಳಿಗೆ ಸೂಚಿಸಲಾಗುವುದು.<br>2. ಸಹಕಾರ ಸಂಘಗಳ ಮುಖಾಂತರ ಅಥವಾ ಅಸಂಘಟಿತ ವಲಯದ ನೇಕಾರರಿಂದ ಪಡೆದ ಭರ್ತಿಮಾಡಿದ ಉಖಖ ಅರ್ಜಿನಮೂನೆಗಳನ್ನು ಹಾಗೂ ಗುರುತಿನ ಚೀಟಿಗಳನ್ನು ಪಡೆದುಅರ್ಹ ನೇಕಾರರನ್ನು ಯೋಜನೆಯಡಿ ಅಳವಡಿಕೆಗೆ ನೋಡಲ್ ಏಜೆನ್ಸಿಗೆ ಶಿಫಾರಸ್ಸು ಮಾಡಲು ಕೇಂದ್ರ ಕಚೇರಿಗೆಕಳುಹಿಸಿಕೊಡಲಾಗುವುದು.<br>ವಿಮಾ ಪರಿಹಾರ ಮೊತ್ತ:<br>1. ವಿಮಾ ಪರಿಹಾರ ಮೊತ್ತವನ್ನು ಮಂಜೂರು ಮಾಡಲು ಅಗತ್ಯ ದಾಖಲಾತಿಗಳೊಂದಿಗೆ ಫಲಾನುಭವಿಗಳಿಂದ/ ಮೃತ ನೇಕಾರರ ನಾಮಿನಿಗಳಿಂದ ಪ್ರಸ್ತಾವನೆ ಪಡೆದು ಸ್ಥಳ ಪರಿಶೀಲನೆ ಮಾಡಿ ಎಲ್.ಐ.ಸಿ. ಗೆ ಶಿಫಾರಸ್ಸು ಮಾಡಲು ಕೇಂದ್ರ ಕಛೇರಿಗೆ ಕಳುಹಿಸಿಕೊಡಲಾಗುವುದು.<br>2. ಎಲ್.ಐ.ಸಿ.ಯವರು ಪ್ರಸ್ತಾವನೆಗಳನ್ನು ಪರಿಶೀಲಿಸಿ ವಿಮಾ ಪರಿಹಾರ ಮೊತ್ತವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಸಂದಾಯ ಮಾಡುತ್ತಾರೆ.<br>ವಿದ್ಯಾರ್ಥಿ ವೇತನ: ಕೇಂದ್ರ ಕಛೇರಿಯಿಂದ ಪ್ರಸಕ್ತ ಸಾಲಿಗೆ ಜನಶ್ರೀ ಬಿಮಾಯೋಜನೆಯಡಿ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಕರೆಯಲು ಪತ್ರ ಬಂದ ನಂತರ<br>1. ನೋಡಲ್ ಏಜೆನ್ಸಿ (ಎಲ್.ಐ.ಸಿ.)ಯಿಂದ ಪಡೆದ ನಿಗಧಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ, ಈ ಕಛೇರಿಗೆ ಸಲ್ಲಿಸಲು ಫಲಾನುಭವಿಗಳಿಗೆ ಸೂಚಿಸಲಾಗುವುದು. | ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ ಕಾರವಾರ |

| | | | | |
|---|---|---|---|---|
| | | | 2.ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರಿಂದ ದೃಢೀಕರಿಸಿದ ಅರ್ಜಿಯನ್ನು ಅಗತ್ಯದಾಖಲಾತಿ ಗಳೊಂದಿಗೆ ಈ ಕಛೇರಿಗೆ ಸಲ್ಲಿಸಬೇಕು.<br>3. ಅರ್ಜಿಗಳನ್ನು ಪರಿಶೀಲಿಸಿ, ಅರ್ಹ ಅರ್ಜಿಗಳನ್ನು ಶಿಫಾರಸ್ಸು ಮಾಡಿ, ವಿದ್ಯಾರ್ಥಿ ವೇತನ ಮಂಜೂರು ಮಾಡುವಂತೆ ಕೋರಿ ಕೇಂದ್ರ ಕಛೇರಿಗೆ ಕಳುಹಿಸಲಾಗುವುದು.<br>4. ಕೇಂದ್ರ ಕಛೇರಿಯಿಂದ ವಿದ್ಯಾರ್ಥಿ ವೇತನದ ಹಣ ಮಂಜೂರಾಗಿ ಬಂದ ಮೇಲೆ ಪ್ರತಿ ವಿದ್ಯಾರ್ಥಿಗಳ ಹೆಸರಿಗೆ ಚೆಕ್ಕನ್ನು ನೀಡಲಾಗುವುದು. | |
| 11 | ವಿಶೇಷ ಘಟಕ ಯೋಜನೆ ಈ ಯೋಜನೆ ಯಡಿ ಬರುವ ಬೇರೆ ಬೇರೆ ಕಾಂಪೋನೆಂಟ್ ಗಳು | 1. ಸುಧಾರಿತ ಮಗ್ಗಗಳ ಮತ್ತು ಉಪಕರಣಗಳ ಸರಬರಾಜು.<br>2. ಉತ್ಪಾದನ ವಹಿವಾಟಿಗೆ ದುಡಿಮೆ ಬಂಡವಾಳ ಪ್ರಾಥಮಿಕ ನೇಕಾರರ ಸಹಕಾರ ಸಂಘಗಳಿಗೆ ಷೇರು ಬಂಡವಾಳ ಮೊತ್ತ.<br>3. ವಸತಿ ಕಾರ್ಯಾಗಾರ/<br>4. ಕಾರ್ಯಾಗಾರ/ಮಗ್ಗದ ಕೋಣೆ ನಿರ್ಮಾಣ<br>5. ಮಗ್ಗ ಪೂರ್ವ ಸೌಲಭ್ಯಗಳು<br>6. ಸಾಮೂಹಿಕ ಸೌಲಭ್ಯ ಕೇಂದ್ರ<br>7. ನೇಕಾರರ ಕಾಲೋನಿಗಳನ್ನು ಅಭಿವೃದ್ಧಿ ಪಡಿಸುವುದು.<br>8. ಮಾರುಕಟ್ಟೆ ಪ್ರೋತ್ಸಾಹ ಯೋಜನೆ<br>9. ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಯ್ಗೆ ತರಬೇತಿ<br>10. ಹೊಸ ಸದಸ್ಯರ ಷೇರು ಮೊತ್ತ ಮುಂತಾದವು. | 1) ಸಹಕಾರ ಸಂಘಗಳಿಂದ/ಅಸಂಘಟಿತ ವಲಯದ ನೇಕಾರರಿಂದ ನಿಗದಿತ ನಮೂನೆ ಯಲ್ಲಿ ಕಾಂಪೋನೆಂಟ್‌ವಾರು /ಯೋಜನೆವಾರು ಅರ್ಜಿಯನ್ನು ಪಡೆದು ಫಲಾನುಭವಿಗಳ ಪಟ್ಟಿ ಅನುಮೋದನೆ ಮತ್ತು ಮಂಜೂರಾತಿಗಾಗಿ ಕೇಂದ್ರ ಕಛೇರಿಗೆ ಶಿಫಾರಸ್ಸು ಮಾಡಲಾಗುವುದು<br>2) ಕೇಂದ್ರ ಕಛೇರಿಯಿಂದ ಅನುಮೋದನೆ ಪಡೆದ ನಂತರ ಫಲಾನುಭವಿಗಳಿಗೆ ಮಂಜೂರಾತಿ ನೀಡಿ ಕಾರ್ಯಕ್ರಮ ಅನುಷ್ಠಾನಗೊಳಿಸುವುದು. | ಸಹಾಯಕ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ ಕಾರವಾರ |
| 12 | ಗಿರಿಜನ ಉಪಯೋಜನೆ ಈ ಯೋಜನೆ ಯಡಿ ಬರುವ ಬೇರೆ ಬೇರೆ ಕಾಂಪೋನೆಂಟ್ ಗಳು | 1. ಸುಧಾರಿತ ಮಗ್ಗಗಳ ಮತ್ತು ಉಪಕರಣಗಳ ಸರಬರಾಜು.<br>2. ಉತ್ಪಾದನ ವಹಿವಾಟಿಗೆ ದುಡಿಮೆ ಬಂಡವಾಳ ಪ್ರಾಥಮಿಕ ನೇಕಾರರ ಸಹಕಾರ ಸಂಘಗಳಿಗೆ ಷೇರು ಬಂಡವಾಳ ಮೊತ್ತ.<br>3. ವಸತಿ ಕಾರ್ಯಾಗಾರ/<br>4. ಕಾರ್ಯಾಗಾರ/ಮಗ್ಗದ ಕೋಣೆ ನಿರ್ಮಾಣ<br>5. ಮಗ್ಗ ಪೂರ್ವ ಸೌಲಭ್ಯಗಳು<br>6. ಸಾಮೂಹಿಕ ಸೌಲಭ್ಯ ಕೇಂದ್ರ<br>7. ನೇಕಾರರ ಕಾಲೋನಿಗಳನ್ನು ಅಭಿವೃದ್ಧಿ ಪಡಿಸುವುದು.<br>8. ಮಾರುಕಟ್ಟೆ ಪ್ರೋತ್ಸಾಹ ಯೋಜನೆ<br>9. ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಯ್ಗೆ ತರಬೇತಿ<br>10. ಹೊಸ ಸದಸ್ಯರ ಷೇರು ಮೊತ್ತ ಮುಂತಾದವು. | 1) ಸಹಕಾರ ಸಂಘಗಳಿಂದ/ಅಸಂಘಟಿತ ವಲಯದ ನೇಕಾರರಿಂದ ನಿಗದಿತ ನಮೂನೆ ಯಲ್ಲಿಕಾಂಪೋನೆಂಟ್‌ವಾರು/ಯೋಜನೆವಾರು ಅರ್ಜಿಯನ್ನು ಪಡೆದು ಫಲಾನುಭವಿಗಳ ಪಟ್ಟಿ ಅನುಮೋದನೆ ಮತ್ತು ಮಂಜೂರಾತಿಗಾಗಿ ಕೇಂದ್ರ ಕಛೇರಿಗೆ ಶಿಫಾರಸ್ಸುಮಾಡಲಾಗುವುದು<br>2) ಕೇಂದ್ರ ಕಛೇರಿಯಿಂದ ಅನುಮೋದನೆ ಪಡೆದ ನಂತರ ಫಲಾನುಭವಿಗಳಿಗೆ ಮಂಜೂರಾತಿ ನೀಡಿ ಕಾರ್ಯಕ್ರಮ ಅನುಷ್ಠಾನಗೊಳಿಸುವುದು. | ಸಹಾಯಕ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ ಕಾರವಾರ |

## ಅಧ್ಯಾಯ 4
## ಸೇವೆಗಳು/ಕಾರ್ಯಕ್ರಮಗಳ ಅನುಷ್ಠಾನಕ್ಕೆ ಬಿಡುಗಡೆಗೊಳಿಸಲು ಇರಬೇಕಾದ ಅಂಗೀಕೃತ ನಮೂನೆಗಳು.

[ಭಾಗ 4(1) (ಬಿ) (iv)]

ಸಾರ್ವಜನಿಕ ಪ್ರಾಧಿಕಾರವು ತಮ್ಮಲ್ಲಿ ಲಭ್ಯವಿರುವ ಕಾರ್ಯಕ್ರಮಗಳು/ಸೇವೆಗಳನ್ನು ನೀಡುವಲ್ಲಿ ಯಾವ ಯಾವ ಮಾನದಂಡಗಳು/ಅಂಗೀಕೃತ ನಮೂನೆಗಳನ್ನು ಸ್ಪಷ್ಟವಾದ ವಿವರಗಳನ್ನು ದಯವಿಟ್ಟು ಒದಗಿಸಿ.

| ಕ್ರ. ಸಂ. | ಕಾರ್ಯಕ್ರಮ/ಸೇವೆಗಳು | ಕಾರ್ಯನಿರ್ವಹಣೆಗಾಗಿ ನಿಗಧಿಪಡಿಸಲಾದ ಮಾನದಂಡಗಳು | ಒದಗಿಸಲಾದ ಸಮಯ | ವಿವರಣೆಗಾಗಿ ನಾಗರಿಕ ಸನದು, ನಾಗರಿಕ ಸೇವೆಗಳಲ್ಲಿ ವಿವರಿಸಲಾದ ಅಧ್ಯಾಯನ ಸಾಮಗ್ರಿಗಳನ್ನು ಪರಾಮರ್ಶನೆ. |
|---|---|---|---|---|
| **1** | ಮಹಾತ್ಮ ಗಾಂಧಿ ಬುನ್ಕರ್ ಬಿಮಾ ಯೋಜನೆ | ಕೈಮಗ್ಗ ನೇಕಾರರಾಗಿದ್ದು, 18 ರಿಂದ 58 ವರ್ಷ ವಯೋಮಿತಿ ಉಳ್ಳವರಾಗಿರಬೇಕು. | 3 ತಿಂಗಳ ಒಳಗಾಗಿ | |
| **2** | ಮಹಾತ್ಮ ಗಾಂಧಿ ಬುನ್ಕರ್‌ಬಿಮಾ ಶಿಕ್ಷಾ ಸಹಯೋಗ ಯೋಜನೆ | ಎಮ್.ಜಿ.ಬಿ.ಬಿ.ವಾಯ್ ಯೋಜನೆಯಡಿ ನೋಂದಾಯಿತ ನೇಕಾರರ ಮಕ್ಕಳು, 9ರಿಂದ 12ನೇ ತರಗತಿ ಯವರೆಗೆ ಓದುತ್ತಿರುವವರು. | ಪ್ರತಿ ವರ್ಷದ ಜುಲೈ ಮಾಹೆಯ ಅಂತ್ಯಕ್ಕೆ. | |
| | ಸಮಗ್ರ ಕೈಮಗ್ಗ ಅಭಿವೃದ್ಧಿ ಯೋಜನೆ | ಕೈಮಗ್ಗ ನೇಕಾರರಿಗೆ ಮಾತ್ರ | ಕಾಲಮಿತಿ ಇಲ್ಲ | |
| **3** | ರಾಜ್ಯ ವಲಯ ವಸತಿ ಕಾರ್ಯಾಗಾರ | 1) ಕರ್ನಾಟಕ ರಾಜ್ಯ ನಿವಾಸಿಯಾಗಿರಬೇಕು.<br>2) ಕೈಮಗ್ಗ/ವಿದ್ಯುತ್ ಮಗ್ಗ/ ಮಗ್ಗ ಪೂರ್ವ ಚಟುವಟಿಕೆಗಳಲ್ಲಿ ನಿರತರಾಗಿರಬೇಕು<br>3) ವಸತಿ ರಹಿತರಾಗಿದ್ದು, ಸ್ವಂತ ನಿವೇಶನ ಹೊಂದಿರಬೇಕು<br>4) ಕೇಂದ್ರಸರ್ಕಾರ/ರಾಜ್ಯ ಸರ್ಕಾರ/ ಜಿಲ್ಲಾ ವಲಯ ಯೋಜನೆಗಳಡಿ ಈ ಹಿಂದೆ ಯಾವುದೇ ವಸತಿ ಸೌಲಭ್ಯವನ್ನು ಪಡೆದಿರಬಾರದು.<br>5) 18 ವರ್ಷ ಮೇಲ್ಪಟ್ಟಿರಬೇಕು<br>6) ಒಂದೇ ಕುಟುಂಬದಲ್ಲಿ ವಾಸವಾಗಿರುವ ಗಂಡ/ಹೆಂಡತಿ ಹೆಸರಿನಲ್ಲಿ ಒಂದು ಮನೆಗೆ ಮಾತ್ರ ಅವಕಾಶ | ಮಂಜೂರಾತಿ ನೀಡಿದ ದಿನಾಂಕದಿಂದ 3 ತಿಂಗಳು. | |
| **4** | ನೇಕಾರರ ಮಿತವ್ಯಯ ನಿಧಿ ಯೋಜನೆ | ಕೆ.ಹೆಚ್.ಡಿ.ಸಿ/ನೇಕಾರ ಸಹಕಾರ ಸಂಘಗಳ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ನೇಕಾರರು | ತ್ರೈಮಾಸಿಕ ಅವಧಿಯ ಅಂತ್ಯಕ್ಕೆ. | |
| **5** | ಜಿಲ್ಲಾ ವಲಯ ಯೋಜನೆ ಕೈಮಗ್ಗ ಉದ್ಯಮಿಗಳಿಗೆ ಸಹಾಯಧನ /ಸಹಕಾರ ಸಂಘಗಳಿಗೆ ಶೇರು ಬಂಡವಾಳ | ನೇಕಾರ ಸಹಕಾರ ಸಂಘದ ನೊಂದಾಯಿತ ಸದಸ್ಯರಿಗೆ ಮಾತ್ರ | ಪ್ರತಿ ವರ್ಷಾಂತ್ಯಕ್ಕೆ. | |
| **6** | ನೂತನ ಜವಳಿ ನೀತಿ ಯೋಜನೆ ಯಡಿ ಸಿದ್ದಉಡುಪು ತರಬೇತಿ/ ಕೌಶಲ್ಯಾಭಿವೃದ್ಧಿ ಕೇಂದ್ರಸ್ಥಾಪನೆ/ ಬಂಡವಾಳ ಹೂಡಿಕೆಸಹಾಯಧನ | 1. ನಿರುದ್ಯೋಗ ಯುವಕ/ ಯುವತಿಯರು | ಕಾಲಮಿತಿ ನಿಗಧಿಪಡಿಸಿರುವುದಿಲ್ಲ | |
| **7** | | 2. ನೋಂದಾಯಿತ (ಜವಳಿ ಕ್ಷೇತ್ರದಲ್ಲಿ) ಸಂಘ ಸಂಸ್ಥೆಗಳು | ಕಾಲಮಿತಿ ನಿಗಧಿಪಡಿಸಿರುವುದಿಲ್ಲ | |
| | ವಿದ್ಯುತ್ ಮಗ್ಗ ನೇಕಾರರಿಗೆ ವಿದ್ಯುತ್ ಸಬ್ಸಿಡಿ | ವಿದ್ಯುತ್ ಮಗ್ಗ ನೇಕಾರರಿಗೆ ಮಾತ್ರ | 6 ತಿಂಗಳ ಒಳಗಾಗಿ | |

| | | | | |
|---|---|---|---|---|
| **8** | ಕೈಮಗ್ಗ ಉತ್ಪನ್ನಗಳಮಾರಾಟದ ಮೇಲೆ ರಾಜ್ಯ ಶೇ.20ರ ಸರ್ಕಾರದ ರಿಬೇಟ್ | ಕೈಮಗ್ಗ ನೇಕಾರ ಸಹಕಾರ ಸಂಘಗಳಿಗೆ ಮಾತ್ರ | 1 ತಿಂಗಳ ಒಳಗಾಗಿ | |
| **9** | ವಿದ್ಯುತ್‌ಮಗ್ಗ ನೇಕಾರರಿಗೆ ಗುಂಪು ವಿಮಾ ಯೋಜನೆಯಡಿ ಅಳವಡಿಕೆ (ಜನಶ್ರೀಬಿಮಾ ಯೋಜನೆ) | ವಿದ್ಯುತ್ ಮಗ್ಗ ನೇಕಾರರಿಗೆ ಮಾತ್ರ ಜನಶ್ರೀ ಭಿಮಾ ಯೋಜನೆ ಉಖಖ ಯೋಜನೆಯಡಿ ನೋಂದಾಯಿತ ನೇಕಾರರ ಮಕ್ಕಳು. 9ರಿಂದ 12 ನೇ ತರಗತಿಯವರೆಗೆ ಓದುತ್ತಿರುವವರು. | 3 ತಿಂಗಳ ಒಳಗಾಗಿ ಪ್ರತಿ ವರ್ಷದ ಜುಲೈ ಮಾಹೆಯ ಅಂತ್ಯಕ್ಕೆ. | |
| **10** | ವಿಶೇಷ ಘಟಕ/ಗಿರಿಜನ ಉಪಯೋಜನೆ ಈ ಯೋಜನೆ ಯಡಿ ಬರುವ ಬೇರೆ ಬೇರೆ ಕಾಂಪೋನೆಂಟ್‌ಗಳು | ಯೋಜನೆಯಡಿ ಬರುವ ಎಲ್ಲಾಸೌಲಭ್ಯಗಳಿಗೆ<br>1. ಕರ್ನಾಟಕ ರಾಜ್ಯದಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ/ಪಂಗಡದ ಫಲಾನುಭವಿಗಳು.<br>2. ಅಸಂಘಟಿತ ವಲಯ/ಕರ್ನಾಟಕರಾಜ್ಯದ ಲ್ಲಿರುವ ಮತ್ತು ನಿಯಮಾನುಸಾರ ನೊಂದಾಯಿತ ಪರಿಶಿಷ್ಟ ಜಾತಿ/ಪಂಗಡದ, ಕೈಮಗ್ಗ/ ವಿದ್ಯುತ್ ಮಗ್ಗ ನೇಕಾರರ ಸಹಕಾರ ಸಂಘ, ವಿವಿದ್ದೋದ್ದೇಶಗಳ/ಸ್ವಯಂ ಸೇವಾ/ಮಹಿಳಾ ಸೇವಾ/ಸರ್ಕಾರೇತರ ಸಹಕಾರ ಸಂಘ ಸಂಸ್ಥೆ ಗಳು.<br>3. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳನ್ವಯ ನೋಂದಾಯಿ ಸಿರುವ ನೂರಕ್ಕೆ ನೂರರಷ್ಟು ಪರಿಶಿಷ್ಟ ಜಾತಿ/ ಪಂಗಡದ ಸದಸ್ಯರನ್ನು ಹೊಂದಿರುವ ಮತ್ತು ಅವರ ಹಿತರಕ್ಷಣೆ/ಕಲ್ಯಾಣಕ್ಕಾಗಿ ಸ್ಥಾಪಿಸಿರುವ ಸಂಘ-ಸಂಸ್ಥೆಗಳಿಗೆ ಮಾತ್ರ ನೀಡತಕ್ಕದ್ದು.<br>4. ಈ ಯೋಜನೆಯಡಿ ಬರುವ ಎಲ್ಲಾ ಸೌಲಭ್ಯಗಳನ್ನು ಒಂದು ಫಲಾನುಭವಿಗೆ ಒಂದು ಸಲ ಮಾತ್ರ ನೀಡಬಹುದು.<br>5. ಕೈಮಗ್ಗ ಅಥವಾ ವಿದ್ಯುತ್ ಚಾಲಿತ ಮಗ್ಗ ಗಳಲ್ಲಿ/ಮಗ್ಗಪೂರ್ವ ಚಟುವಟಿಕೆಗಳಲ್ಲಿ ನಿರತರಾಗಿರಬೇಕು.<br>6. ಸರ್ಕಾರದ ಇತರೆ ಯಾವುದೇಯೋಜನೆ ಗಳಲ್ಲಿ ಈ ಸೌಲಭ್ಯ ಪಡೆದಿರಬಾರದು.___ | ಕಾಲಮಿತಿ ನಿಗಧಿಪಡಿಸಿರುವುದಿಲ್ಲ | |

ಅಧ್ಯಾಯ 5
ಸಾರ್ವಜನಿಕ ಸೇವೆಗಳು/ಕಾರ್ಯಕ್ರಮಗಳ ಅನುಷ್ಠಾನಕ್ಕೆ ಬಿಡುಗಡೆಗೊಳಿಸಲಾದ, ನಿಯಮಗಳು,
ನಿಬಂಧನೆ, ಮಾರ್ಗಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳು.

[ಭಾಗ(1) (ಬಿ)(v) & (vi)]

ಸಾರ್ವಜನಿಕ ಪ್ರಾಧಿಕಾರದ ಅಧೀನದಲ್ಲಿರುವ ಸುಪರ್ಧಿಯಲ್ಲಿರುವ ಅಥವಾ ಉಪಯೋಗಿಸಲ್ಪಡುವ ನೌಕರರು/ಅಧಿಕಾರಿಗಳಿಗೆ ಬಿಡುಗಡೆಗೊಳಿಸಲಾದ ಸಾರ್ವಜನಿಕ ಸೇವೆಗಳ/ಕಾರ್ಯಕ್ರಮಗಳ ಅನುಷ್ಠಾನಕ್ಕೇರುವ ಮಾಹಿತಿಗಳನೊಳಗೊಂಡ ಪಟ್ಟಿ ಅಥವಾ ನಮೂನೆಗಳನ್ನು ದಯವಿಟ್ಟು ಒದಗಿಸವುದು.

## ಜಿಲ್ಲಾ ವಲಯ ಯೋಜನೆಗಳು
## ಕೈಮಗ್ಗ ಮತ್ತು ಜವಳಿ ಇಲಾಖೆ

ಯೋಜನೆ ಕಾರ್ಯಕ್ರಮಗಳು
ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು

### ಕೈಮಗ್ಗ ಉದ್ದಿಮೆಗಳಿಗೆ ಸಹಾಯ:

### ಯೋಜನೆಯ ವಿವರಗಳು:

ಇದು ರಾಜ್ಯ ಸರ್ಕಾರದ ಕಾರ್ಯಕ್ರಮವಾಗಿದ್ದು, ಅನುದಾನ ಪೂರ್ಣ ರಾಜ್ಯದ್ದಾಗಿದ್ದು, ಜಿಲ್ಲಾ ಪಂಚಾಯಿತಿ ಮುಖಾಂತರ ಹಣ ಬಿಡುಗಡೆಯಾಗುತ್ತದೆ. ಈ ಯೋಜನೆಯಲ್ಲಿ ದುಡಿಮೆ ಬಂಡವಾಳಕ್ಕಾಗಿ ಸಾಲ, ಮಗ್ಗಗಳ ಆಧುನೀಕರಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದರಿಂದ ಸಹಕಾರ ಸಂಘಗಳು ಸಂಘದ ಸದಸ್ಯರಿಗೆ ಉದ್ಯೋಗ ಒದಗಿಸಲು ಹಾಗೂ ಹೊಸ ನಮೂನೆಯ ಬಟ್ಟೆಗಳನ್ನು ತಯಾರಿಸಲು ಅನುಕೂಲವಾಗಿದೆ ಹಾಗೂ ಮಗ್ಗಗಳ ಆಧುನೀಕರಿಸುವುದರಿಂದ ಉತ್ಪಾದನಾ ಗುಣಮಟ್ಟ ಉತ್ತಮವಾಗುತ್ತದೆ.

### ಉದ್ದೇಶಿತ ಗುಂಪುಗಳು:

ಕೈಮಗ್ಗ ನೇಕಾರ ಸಂಘಗಳಿಗೆ ನೀಡಲಾಗುವುದು.

### ಯೋಜನೆಗಳ ಅನುಷ್ಠಾನ ವಿಧಾನ:

ಅ) ಜಿಲ್ಲಾ ಮಟ್ಟದ ಅಧಿಕಾರಿಗಳು ಮುಂಚಿತವಾಗಿಯೇ ಅರ್ಹ ಸಹಕಾರ ಸಂಘಗಳ ಆಯ್ಕೆ ಮಾಡಿ ಪಟ್ಟಿ ಮಾಡಿ ಕೊಂಡಿರಬೇಕು. ಲಿಂಕ್ ಡಾಕ್ಯೂಮೆಂಟ್‌ನಲ್ಲಿ ಅನುಮೋದಿತ ಅನುದಾನ ಗಮನದಲ್ಲಿಟ್ಟುಕೊಂಡು ಸಹಕಾರ ಸಂಘದ ಸದಸ್ಯರನ್ನು ಸಹಕಾರಿ ಸಂಘದ ಆಡಳಿತ ಮಂಡಳಿಯ ಸಹಕಾರದಿಂದ ಗುರುತಿಸಬೇಕು. ಅಂತಹ ಸದಸ್ಯರ ನಿವೇಶನಗಳ ದಾಖಲಾತಿಗಳ ದಾಖಲಾತಿಗಳನ್ನು ಪರಿಶೀಲಿಸಿ, ಸಹಕಾರಿ ಸಂಘದ ಆಡಳಿತಮಂಡಳಿಯಲ್ಲಿ ಅನುಮೋದಿಸಿ ಪ್ರಸ್ತಾವನೆಯನ್ನು ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಅಧಿಕಾರಿಗಳಿಗೆ ಕಳುಹಿಸಬೇಕು.

ಆ) ಜಿಲ್ಲಾ ಅಧಿಕಾರಿಗಳು, ಪ್ರಸ್ತಾವನೆಯನ್ನು ಪರಿಶೀಲಿಸಿ, ಸ್ಥಳ ಪರೀಕ್ಷೆ ನಡೆಸಿ, ಸಹಕಾರಿ ಸಂಘದ ಸದಸ್ಯರ ವಿವರ ಪಡೆದು, ಅನುದಾನದಿಂದ ಹಂಚಿಕೆಗೆ ಅನುಗುಣವಾಗಿ ನೇಕಾರ ಸಹಕಾರ ಸಂಘಕ್ಕೆ ಅನುದಾನ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ / ಯೋಜನೆ, ಹಣಕಾಸು ಮತ್ತು ಲೆಕ್ಕಪರಿಶೋಧನಾ ಸ್ಥಾಯಿ ಸಮಿತಿಯ ಮೂಲಕ ಜಿಲ್ಲಾ ಪಂಚಾಯಿತಿಯ ಅನುಮೋದನೆ ಪಡೆಯುವುದು. ಜಿಲ್ಲಾ ಪಂಚಾಯಿತಿಯಿಂದ ಆಡಳಿತಾತ್ಮಕ ಅನುಮತಿ ಪಡೆದು ಜಿಲ್ಲಾ ಅಧಿಕಾರಿಗಳು ಆಯಾ ಸಹಕಾರಿ ಸಂಘಕ್ಕೆ ಅನುದಾನ ಮಂಜೂರಾತಿಗಾಗಿ ಕ್ರಮ ಕೈಗೊಳ್ಳಬೇಕು. ಸಹಕಾರ ಸಂಘದ ವಿಶೇಷ ಖಾತೆಗೆ ಹಣ ಜಮಾ ಮಾಡಿ ಜಂಟಿ ಹೆಸರಿನಲ್ಲಿ ಇರಿಸಿ, ಹಂತಹಂತವಾಗಿ ಹಣ ಬಿಡುಗಡೆ ಮಾಡಬೇಕು. ಕೈಮಗ್ಗಗಳ ಆಧುನೀಕರಣ/ಖರೀದಿಗೆ ನಿಯಮಾವಳಿಗಳಂತೆ ಸಂಘದವರು ಕ್ರಮತೆಗೆದುಕೊಳ್ಳಲು ಸೂಕ್ತ ಮಾರ್ಗದರ್ಶನ ನೀಡಿ ಯೋಜನೆ ಫಲಶೃತಿ ಆಗುವಂತೆ ನೋಡುವುದು.

ದುಡಿಮೆ ಬಂಡವಾಳ ಸಾಲಕ್ಕಾಗಿ ಸಹಕಾರ ಸಂಘಗಳು ಮಂಜೂರಾದ ಅನುದಾನಕ್ಕೆ ಕರ್ನಾಟಕ ಸರ್ಕಾರ ರಾಜ್ಯಪಾಲರ ಹೆಸರಿನಲ್ಲಿ ಸಾಲ ಖಾತ್ರಿ ಬಾಂಡನ್ನು ಮಾಡಿಕೊಡತಕ್ಕದ್ದು, ಈ ಸಾಲವನ್ನು 10 ಸಮ ಕಂತುಗಳಲ್ಲಿ ತುಂಬುವುದು.

## ಕೈಮಗ್ಗ ಉದ್ದಿಮೆಗಳಿಗೆ ಸಾಲ:

ಯೋಜನಾ ವಿವರಗಳು:–

ಇದು ರಾಜ್ಯ ಕಾರ್ಯಕ್ರಮವಾಗಿದ್ದು, ಅನುದಾನ ಪೂರ್ಣ ರಾಜ್ಯದ್ದಾಗಿರುತ್ತದೆ. ಕೈಮಗ್ಗ ಸಹಕಾರ ಸಂಘಗಳಲ್ಲಿ ನೋಂದಾಯಿತ ಸದಸ್ಯರುಗಳಿಗೆ ಸಂಘದ ಮುಖಾಂತರ ಉದ್ಯೋಗ ಒದಗಿಸಲು ಸಂಘದ ಉತ್ಪಾದನೆಯ ಆಧಾರದ ಮೇಲೆ ಪ್ರತಿ ಮಗ್ಗದ ಮೇಲೆ ಲೆಕ್ಕಾಚಾರ ಮಾಡಿ ನೀಡಲಾಗುವುದು. ಸಾಲವನ್ನು 10 ವರ್ಷಗಳ ಸಮಕಂತಿನಲ್ಲಿ
ಸರ್ಕಾರಕ್ಕೆ ಹಿಂತಿರುಗಿಸತಕ್ಕದ್ದು.ಈ ರೀತಿ ಸಾಲ ಮಂಜೂರು ಮಾಡುವಾಗ ನಬಾರ್ಡ್‌ನ ಪವರ್ ಲೂಂ ಸ್ಕೇಲ್ ದರದಂತೆ
ಅರ್ಹ ಮಗ್ಗಗಳಿಗೆ ಸಾಲ ಲೆಕ್ಕ ಹಾಕಿ ಮಂಜೂರು ಮಾಡಬೇಕು.

### 3.1 ಯೋಜನೆಗಳ ಅನುಷ್ಠಾನ ವಿಧಾನ:–

ಅ) ಲಿಂಕ್ ಡಾಕ್ಯುಮೆಂಟ್‌ನಲ್ಲಿ ಅನುಮೋದಿತ ಸಾಲ ಗಮನದಲ್ಲಿ ಇಟ್ಟುಕೊಂಡು ಸಹಕಾರ ಸಂಘದ ಅರ್ಹ ಸದಸ್ಯರನ್ನು ಸಹಕಾರಿ ಸಂಘದ ಆಡಳಿತ ಮಂಡಳಿಯ ಸಹಕಾರದಿಂದ ಗುರುತಿಸಬೇಕು. ಸಹಕಾರಿ ಸಂಘದ ಆಡಳಿತ ಮಂಡಳಿಯಲ್ಲಿ ಅನುಮೋದಿಸಿ ಪ್ರಸ್ತಾವನೆಯನ್ನು ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಅಧಿಕಾರಿಗಳಿಗೆ ಕಳುಹಿಸಬೇಕು.

ಆ) ಜಿಲ್ಲಾ ಅಧಿಕಾರಿಗಳು ಈ ಪ್ರಸ್ತಾವನೆಯನ್ನು ಪರಿಶೀಲಿಸಿ, ಸ್ಥಳ ಪರೀಕ್ಷೆ ನಡೆಸಿ, ಸಹಕಾರ ಸಂಘದ ಸದಸ್ಯರ ವಿವರ ಪಡೆದು, ಅನುದಾನ ಹಂಚಿಕೆಗೆ ಅನುಗುಣವಾಗಿ ನೇಕಾರ ಸಹಕಾರ ಸಂಘಕ್ಕೆ ಸಾಲ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು
ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ / ಹಣಕಾಸು ಮತ್ತು ಲೆಕ್ಕ ಪರಿಶೋಧನಾ ಸ್ಥಾಯಿ ಸಮಿತಿಯ ಮೂಲಕ ಜಿಲ್ಲಾ ಪಂಚಾಯತ್‌ನ ಅನುಮೋದನೆ ಪಡೆಯುವುದು. ಜಿಲ್ಲಾ ಪಂಚಾಯತ್‌ನಿಂದ ಆಡಳಿತಾತ್ಮಕ ಅನುಮತಿ ಪಡೆದು ಜಿಲ್ಲಾ ಅಧಿಕಾರಿಗಳು ಆಯಾ ಸಹಾಕಾರಿ ಸಂಘಕ್ಕೆ ಸಾಲ ಮಂಜೂರಾತಿಗೆ ಕ್ರಮ ಕೈಗೊಳ್ಳಬೇಕು. ಸಹಕಾರ ಸಂಘದ ವಿಶೇಷ ಖಾತೆಗೆ ಹಣ ಜಮಾ ಮಾಡಿ ಜಂಟಿ ಹೆಸರಿನಲ್ಲಿ ಇರಿಸಿ, ಹಂತ ಹಂತವಾಗಿ ಹಣ ಬಿಡುಗಡೆ ಮಾಡಬೇಕು.

### 3.2 ಮಾನಿಟರಿಂಗ್:–

ಸಹಕಾರಿ ಸಂಘದವರು ನೇಕಾರ ಸದಸ್ಯರಿಗೆ ಕಚ್ಚಾಮಾಲು ಕೊಳ್ಳಲು ವಿತರಿಸಲು ಈ ಹಣ ಬಳಸತಕ್ಕದ್ದು ಹಾಗೂ ಈ ಬಗ್ಗೆ ಜಿಲ್ಲಾ ಅಧಿಕಾರಿಗಳು ಸೂಕ್ತ ತಪಾಸಣೆ ನಡೆಸಿ ಸದಸ್ಯರಿಗೆ ಪ್ರಯೋಜನ ತಲುಪಿದ ಬಗ್ಗೆ ಖಾತರಿ ಪಡಿಸಿಕೊಳ್ಳತಕ್ಕದ್ದು.

## 3. ಕೈಮಗ್ಗ ಸಹಕಾರಿ ಸಂಘಗಳಲ್ಲಿ ಸರ್ಕಾರಿ ಶೇರು ಮೊತ್ತ

### 3.1 ಕಾರ್ಯಕ್ರಮದ ಹಿನ್ನೆಲೆ ಹಾಗೂ ಉದ್ದೇಶ:–

ನೇಕಾರರ ಸಹಕಾರ ಸಂಘಗಳಿಗೆ ಸಹಕಾರಿ ಷೇರು ಮೊತ್ತವನ್ನು ನೀಡಿ ಸಹಕಾರಿ ಸಂಘದ ಬಲವರ್ಧನೆಗೆ ಈ ಯೋಜನೆಯಡಿ ಅವಕಾಶ ಇರುವುದು ಹಾಗೂ ಸಹಕಾರಿ ಸಂಘದ ಸಾಲ ಎತ್ತುವ ಸಾಮರ್ಥ್ಯವನ್ನು ಹಾಗೂ ಉತ್ಪಾದನಾ ಮತ್ತು ಮಾರಾಟ ಚಟುವಟಿಕೆಗಳನ್ನು ಹೆಚ್ಚಿಸಲು ಈ ಯೋಜನೆ ಸಹಕಾರಿಯಾಗಿರುತ್ತದೆ.

### 3.2 ಉದ್ದೇಶಿತ ಗುಂಪುಗಳು:–

ನೇಕಾರರ ಸಹಕಾರಿ ಸಂಘಗಳಿಗೆ ಈ ಯೋಜನೆಯಡಿ ಸರ್ಕಾರಿ ಷೇರುಗಳನ್ನು ನೀಡಲಾಗುವುದು.

### 3.3 ಯೋಜನಾ ವಿವರಗಳು:–

ಈ ಯೋಜನೆಯಿಂದ ನೇಕಾರ ಸಹಕಾರಿ ಸಂಘಗಳಲ್ಲಿ ಸದಸ್ಯರ ಪಾಲು ಬಂಡವಾಳದಷ್ಟು ಸರ್ಕಾರಿ ಷೇರು ನೀಡ ಬಹುದಾಗಿದೆ. ಸರಕಾರಿ ಷೇರನ್ನು ಹೂಡಲಾಗುವುದು. ಇದರಿಂದ ಸಹಕಾರಿ ಸಂಘಗಳಿಗೆ ಸಾಲ ಪಡೆಯುವ ಸಾಮರ್ಥ್ಯ ಹೆಚ್ಚಿಸಲು ಅನುಕೂಲವಾಗುತ್ತದೆ ಹಾಗೂ ಸಹಕಾರಿ ಬ್ಯಾಂಕ್‌ಗಳಿಂದ ಸಾಲಪಡೆಯಲು ಸಾಧ್ಯವಾಗುತ್ತದೆ. ಸಹಕಾರಿ ಸಂಘವು ತನ್ನ ಲಾಭದಲ್ಲಿ ಸದಸ್ಯರಿಗೆ ನೀಡುವಂತೆ, ಈ ಹೂಡಿಕೆ ಮೇಲೆ ಮಂಡಳಿ ನಿರ್ಧರಿಸಿದಂತೆ ಲಾಭಾಂಶ ನೀಡಬೇಕು.

ಯೋಜನೆಗಳ ಅನುಷ್ಠಾನ ವಿಧಾನ:–

ಲಿಂಕ್ ಡಾಕ್ಯೂಮೆಂಟ್‌ನಲ್ಲಿ ಅನುಮೋದಿತ ಅನುದಾನ ಗಮನದಲ್ಲಿ ಇರಿಸಿಕೊಂಡು ಅರ್ಹ ಸಹಕಾರಿ ಸಂಘವನ್ನು ಜಿಲ್ಲಾ ಅಧಿಕಾರಿಗಳು ಗುರುತಿಸಬೇಕು. ಆಡಳಿತ ಮಂಡಳಿಯಲ್ಲಿ ತೀರ್ಮಾನ ತೆಗೆದುಕೊಂಡು ಠರಾವಿನೊಂದಿಗೆ ಪ್ರಸ್ತಾವನೆಯನ್ನು ಜಿಲ್ಲಾ ಕಛೇರಿಗೆ ನೀಡಬೇಕು. ಜಿಲ್ಲಾ ಅಧಿಕಾರಿಗಳು, ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಅನುದಾನ ಹಂಚಿಕೆಗೆ ಅನುಗುಣವಾಗಿ ಪ್ರಸ್ತಾವನೆಯನ್ನು ಮಂಜೂರಾತಿಗಾಗಿ ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿ / ಯೋಜನೆ ಹಣಕಾಸು ಮತ್ತು ಲೆಕ್ಕ ಪರಿಶೋದನಾ ಸ್ಥಾಯಿ ಸಮಿತಿಯ ಮೂಲಕ ಜಿಲ್ಲಾ ಪಂಚಾಯತ್‌ನಿಂದ ಆಡಳಿತಾತ್ಮಕ ಅನುಮತಿ ಪಡೆದು ಜಿಲ್ಲಾ ಅಧಿಕಾರಿಗಳು ಸಹಕಾರಿ ಸಂಘಕ್ಕೆ ಮಂಜೂರಾತಿ ನೀಡಬೇಕು. ಸಂಘಕ್ಕೆ ಹಣವನ್ನು ಬಿಡುಗಡೆ ಮಾಡುವ ಮುಂಚೆ ಸಂಘದವರಿಂದ ಮಂಜೂರಾಗಿರುವ ಮೊತ್ತಕ್ಕೆ ಕರ್ನಾಟಕ ಸರ್ಕಾರದ ಘನ ರಾಜ್ಯಪಾಲರ ಹೆಸರಿನಲ್ಲಿ ಷೇರು ಪ್ರಮಾಣ ಪತ್ರ ಪಡೆದುಕೊಂಡು ಕಛೇರಿಯಲ್ಲಿ ಭದ್ರವಾಗಿಟ್ಟುಕೊಳ್ಳಬೇಕು. ನಂತರ ಸಂಘಕ್ಕೆ ಹಣ ಬಿಡುಗಡೆ ಮಾಡಬೇಕು.

ಸಹಕಾರಿ ಸಂಘವು ತನ್ನ ಲಾಭದಲ್ಲಿ ಸದಸ್ಯರಿಗೆ ನೀಡುವಂತೆ, ಸರ್ಕಾರದ ಷೇರು ಬಂಡವಾಳ ಮೊತ್ತಕ್ಕೆ ಪ್ರತಿ ವರ್ಷ ಡಿವೆಡೆಂಡ್ ಘೋಷಿಸಿ ಸರ್ಕಾರಕ್ಕೆ ಮರುಪಾವತಿಸಲು ಕ್ರಮ ತೆಗೆದುಕೊಳ್ಳಬೇಕು.

ರಾಜ್ಯ ವಲಯ ಯೋಜನೆಗಳು

1. ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯ :–

- ❖ ಕೈಮಗ್ಗ ವಲಯದ ಅಭಿವೃದ್ಧಿಗಾಗಿ ಕೈಮಗ್ಗ ಸಹಕಾರ ಸಂಘಗಳ ಮತ್ತು ನೇಕಾರರ ಉನ್ನತೀಕರಣಕ್ಕಾಗಿ ಸಹಾಯ ಒದಗಿಸಲಾಗುತ್ತಿದೆ.
- ❖ ಈ ಕೆಳಕಂಡ ಉಪಯೋಜನೆಗಳನ್ನು ಅನುಷ್ಟಾನಗೊಳಿಸಲಾಗುತ್ತಿದೆ.

1. ನಬಾರ್ಡ್ ಪುನರ್ಧನ ಯೋಜನೆಯಡಿ ದುಡಿಮೆ ಬಂಡವಾಳ ಸಾಲ ಪಡೆದ ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಗರಿಷ್ಠ ಶೇ.3ರ ಬಡ್ಡಿ ಸಹಾಯಧನ ಒದಗಿಸಲಾಗುವುದು.

2. ಹೊಸ ವಿನ್ಯಾಸ ಮತ್ತು ಪ್ರವೃತ್ತಿ:– ನೇಯ್ಗೆ ಚಟುವಟಿಕೆಯಲ್ಲಿ ಹೊಸ ಮಾದರಿ ಹಾಗೂ ತಂತ್ರಜ್ಞಾನದ ಬಗ್ಗೆ ತಿಳುವಳಿಕೆಗಾಗಿ ಪ್ರವಾಸ ಕೈಗೊಳ್ಳಲು ಅನುದಾನ ನೀಡಲಾಗುವುದು.

- ❖ ರಾಜ್ಯದ ಅಭ್ಯರ್ಥಿಗಳಿಗೆ ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಸೇಲಂ, ವೆಂಕಟಗಿರಿ, ಮತ್ತು ಕಣ್ಣೂರು ಹಾಗೂ ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ ನರಸಾಪುರ ಗದಗ ಈ ಸಂಸ್ಥೆಗಳಲ್ಲಿ ಕೈಮಗ್ಗ/ಜವಳಿ ತಂತ್ರಜ್ಞಾನದಲ್ಲಿ ಮೂರು ವರ್ಷದ ಅವಧಿಯ ಡಿಪ್ಲೋಮಾ ಕೋರ್ಸ ಪಡೆಯಲು ನಿಯೋಜಿಸಲಾಗುವುದು. ತರಬೇತಿಯ ಅವಧಿಯಲ್ಲಿ ಅಭ್ಯರ್ಥಿಗಳಿಗೆ ಶಿಷ್ಯವೇತನ, ಪುಸ್ತಕಗಳ ಖರೀದಿ ವೆಚ್ಚ ಹಾಗೂ ಯೋಜನಾ ಭತ್ಯೆ ನೀಡಲಾಗುವುದು.
- ❖ ಕೈಮಗ್ಗ ನೇಕಾರರಿಗೆ ಪ್ರಶಸ್ತಿಗಳು:– ರಾಜ್ಯದಲ್ಲಿ ಹೊಸ ವಿನ್ಯಾಸದ ನೇಯ್ಗೆಗೆ ಪ್ರೋತ್ಸಾಹ ನೀಡಲು ಪ್ರತೀ ವರ್ಷ ರೇಷ್ಮೆ, ಹತ್ತಿ, ಮತ್ತು ಉಣ್ಣೆ ನೂಲಿನ ನೇಕಾರರನ್ನು ಪ್ರತ್ಯೇಕವಾಗಿ ಆಯ್ಕೆ ಮಾಡಿ ಪ್ರಶಸ್ತಿ ನೀಡಲಾಗುವುದು.

3. ಕೈಮಗ್ಗ ಉತ್ಪನ್ನಗಳ ಮಾರಾಟ (20% ರಿಬೇಟ್)–ಸಹಕಾರ ಸಂಘಗಳು:–

- ❖ ರಾಜ್ಯದ ಕೈಮಗ್ಗ ನೇಕಾರರ ಸಹಕಾರ ಸಂಘಗಳು ಮತ್ತು ಕಾವೇರಿ ಹ್ಯಾಂಡ್‌ಲೂಮ್ಸ್ ಸಂಸ್ಥೆಯು ವಾರ್ಷಿಕ ನಿಗದಿಪಡಿಸಿದ 135 ದಿನಗಳಲ್ಲಿ ಮಾರಾಟ ಮಾಡಿದ ಕೈಮಗ್ಗ ಉತ್ಪನ್ನಗಳ ಮೇಲೆ 20% ರಿಬೇಟ್‌ನ್ನು ರಾಜ್ಯ ಸರ್ಕಾರದ ವತಿಯಿಂದ ಮರುಪಾವತಿಸಲಾಗುವುದು.

4. ಮಾರ್ಕೆಟಿಂಗ್ ಅಂಡ್ ಎಕ್ಸ್‌ಪೋರ್ಟ್ ಪ್ರಮೋಷನ್ ಸ್ಕೀಮ್:–

- ❖ ಈ ಯೋಜನೆಯಡಿ ಕೈಮಗ್ಗ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಮತ್ತು ಪ್ರಚಾರವನ್ನು ಒದಗಿಸಲು ಮೇಳಗಳನ್ನು ಆಯೋಜಿಸಲಾಗುವುದು.

1. ರಾಷ್ಟ್ರೀಯ ಕೈಮಗ್ಗ ಮೇಳ 3 ವಾರಗಳ ಅವಧಿಗೆ ಈ ಮೇಳ ಆಯೋಜಿಸಲು ಕೇಂದ್ರ ಸರ್ಕಾರ ಗರಿಷ್ಠ ರೂ.37.50 ಲಕ್ಷಗಳ ಅನುದಾನವನ್ನು ಒದಗಿಸುತ್ತದೆ.
2. ವಿಶೇಷ ಕೈಮಗ್ಗ ಮೇಳ 2 ವಾರಗಳ ಅವಧಿಗೆ ಈ ಮೇಳ ಆಯೋಜಿಸಲು ಕೇಂದ್ರಸರ್ಕಾರ ಗರಿಷ್ಠ ರೂ.8.00 ಲಕ್ಷಗಳ ಅನುದಾನವನ್ನು ಒದಗಿಸುತ್ತದೆ.
3. ಜಿಲ್ಲಾ ಕೈಮಗ್ಗ ಮೇಳ 5ರಿಂದ 7 ದಿನಗಳ ಅವಧಿಯ ಈ ಮೇಳವನ್ನು ಜಿಲ್ಲಾ ಮಟ್ಟದಲ್ಲಿ ಆಯೋಜಿಸಲು ಕೇಂದ್ರ ಸರ್ಕಾರ ಗರಿಷ್ಠ ರೂ.2.00 ಲಕ್ಷಗಳ ಅನುದಾನವನ್ನು ಒದಗಿಸುತ್ತದೆ.
4. ಆಕಾಶ್ ಮತ್ತು ಎನ್‌ಹೆಚ್‌ಡಿಸಿ ಸಂಸ್ಥೆಗಳು ದೇಶದ ವಿವಿಧ ನಗರಗಳಲ್ಲಿ ಆಯೋಜಿಸಲಾಗುವ ಸಿಲ್ಕ್ ಫ್ಯಾಬ್/ಉಲ್ ಫ್ಯಾಬ್ ಇತರೆ ಕೈಮಗ್ಗ ಮೇಳಗಳಲ್ಲಿ ನೇಕಾರರ ಸಹಕಾರ ಸಂಘಗಳು ಭಾಗವಹಿಸಬಹುದಾಗಿರುತ್ತದೆ.
5. ರಾಜ್ಯ ಸರ್ಕಾರದ ವತಿಯಿಂದಲೂ ಸಹ ಕೈಮಗ್ಗ ಸಹಕಾರ ಸಂಘಗಳು ಯೋಜನೆಯಡಿ ರಾಜ್ಯ ಮಟ್ಟದ ಕೈಮಗ್ಗ ಮೇಳವನ್ನು ಪ್ರತಿ ವರ್ಷ ಬೆಂಗಳೂರಿನಲ್ಲಿ ಏರ್ಪಡಿಸಲಾಗುತ್ತಿದೆ.

6. ಕೈಮಗ್ಗ ನೇಕಾರರ ಮಿತವ್ಯಯನಿಧಿ ಯೋಜನೆ :–

ಈ ಯೋಜನೆಯಡಿಯಲ್ಲಿ ನೇಕಾರರ ದುಡಿಮೆಯಿಂದ ಶೇಕಡ 8ರಷ್ಟನ್ನು ಕಟಾಯಿಸಿ ರಾಜ್ಯ ಸರ್ಕಾರದಿಂದ ಶೇಕಡ 8ರಷ್ಟು ಸಮ ಚಂದಾವನ್ನು ಸೇರಿಸಿ ಸಂಬಂಧಪಟ್ಟ ತಾಲ್ಲೂಕು ಖಜಾನೆಯ ನೇಕಾರರ ಖಾತೆಗೆ ಜಮಾ ಮಾಡ ಲಾಗುವುದು. ಜಮೆಯಾದ ಮೊತ್ತಕ್ಕೆ ರಾಜ್ಯ ಸರ್ಕಾರದ ವತಿಯಿಂದ ವಾರ್ಷಿಕ ಶೇಕಡ 12ರಷ್ಟು ಬಡ್ಡಿ ನೀಡಲಾಗುವುದು. ಈ ಯೋಜನೆಯಡಿಯಲ್ಲಿ ಅಳವಡಿಕೆಯಾದ ಫಲಾನುಭವಿ ಮದುವೆ, ಮನೆ–ಕಟ್ಟಡ, ವೈದ್ಯಕೀಯ ಹಾಗೂ ಮಕ್ಕಳ ವಿದ್ಯಾ ಭ್ಯಾಸಕ್ಕಾಗಿ ಮುಂಗಡವನ್ನು ಪಡೆಯಬಹುದಾಗಿದೆ. ಈ ಯೋಜನೆಯಲ್ಲಿ ಅಳವಡಿಸಲಾದ ಫಲಾನುಭವಿಗಳು 15 ವರ್ಷಗಳ ನಂತರ ಅಥವಾ ನೇಕಾರರ ವೃತ್ತಿ ಮಾಡಲು ಸಾಧ್ಯವಾಗದಿದ್ದ ಪಕ್ಷದಲ್ಲಿ ಅಥವಾ ಅವನಿಗೆ 60 ವರ್ಷ ತುಂಬಿದ ನಂತರ
ಪಾವತಿಯಾದ ಪೂರ್ತಿ ಹಣವನ್ನು ಬಡ್ಡಿ ಸಮೇತ ಹಿಂದಿರುಗಿಸಲಾಗುವುದು.

7. ನೇಕಾರರ ವಿಶೇಷ ಪ್ಯಾಕೇಜ್:–

| ಕ್ರ. ಸಂ. | ಉಪಯೋಜನೆಗಳು |
|---|---|
| 1 | 20 ಹೆಚ್.ಪಿ. ವರೆಗೆ ವಿದ್ಯುತ್ ಸಂಪರ್ಕ ಹೊಂದಿರುವ ವಿದ್ಯುತ್‌ಮಗ್ಗ ಘಟಕಗಳಿಗೆ (ಮಗ್ಗಪೂರ್ವ ಸೌಲಭ್ಯಗಳೂ ಸೇರಿದಂತೆ) ವಿದ್ಯುತ್ ದರ ರಿಯಾಯಿತಿ ಸಹಾಯಧನ–ಪ್ರತಿ ಯುನಿಟ್‌ಗೆ ರೂ.1.25ಗಳ ದರದಲ್ಲಿ ವಿದ್ಯುತ್ ಸರಬರಾಜು ಮಾಡಲಾಗುವುದು. |
| 2 | ಕರ್ನಾಟಕ ಕೈಮಗ್ಗ ತರಬೇತಿ ಸಂಸ್ಥೆ, ಗದಗ ಮತ್ತು ಅಡ್ವಾನ್ಸ್‌ಡ್ ತರಬೇತಿ ಸಂಸ್ಥೆ, ಜಮಖಂಡಿ ಸಂಸ್ಥೆಗಳಿಗೆ ಆವರ್ತಕ ವೆಚ್ಚ ಭರಿಸುವುದು. |
| 3 | ನೇಕಾರರಿಗೆ ಶೇ.3ರ ದರದಲ್ಲಿ ಸಾಲ ನೀಡುವ ಸಹಕಾರ ಸಂಘಗಳು ಮತ್ತು ಪಟ್ಟಣ ಸಹಕಾರ ಸಂಘಗಳಿಗೆ ಬಡ್ಡಿ ಸಹಾಯಧನ – ಶೇ.3ರ ದರದಲ್ಲಿ ಸಾಲ ಒದಗಿಸಲು ಸಹಾಯಧನವನ್ನು ಭರಿಸಲಾಗುವುದು. |
| 4 | ಕೈಮಗ್ಗ ನೇಕಾರರ ಮಿತವ್ಯಯ ನಿಧಿ ಯೋಜನೆಯಡಿ ವಾರ್ಷಿಕ ಶೇ. 12ರ ಬಡ್ಡಿಯನ್ನು ಮಂಜೂರು ಮಾಡಲಾಗುವುದು. |
| 5 | ನೇಕಾರರಿಗೆ ಸೋಲಾರ್ ದೀಪ ಒದಗಿಸುವುದು–ಸೋಲಾರ್ ದೀಪ ಖರೀದಿಸಲು ಶೇ. 25 ಸಹಾಯಧನ ಒದಗಿಸಲಾ ಗುವುದು. |
| 6 | ಹೊಸ ಕಾಂಪೊನೆಂಟ್‌ಗಳು |
| 7 | ಕಚ್ಚಾಮಾಲು ಖರೀದಿಗಾಗಿ ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯಧನ (ಹೊಸ ಉಪಯೋಜನೆ)–ಎನ್.ಹೆಚ್.ಡಿ.ಸಿ. ಯಿಂದ ಖರೀದಿಸಲಾಗುವ ಕಚ್ಚಾ ಮಾಲಿಗೆ ಪ್ರತಿ ಕೆ.ಜಿ.ಗೆ ರೂ.15/–ರಂತೆ ಸಹಾಯಧನ ನೀಡಲಾಗುವುದು. |
| 8 | ಕೈಮಗ್ಗ ಸಹಕಾರ ಸಂಘಗಳಿಗೆ ವ್ಯಾಟ್ ಮರುಪಾವತಿ– ಸರ್ಕಾರದ ಅನುಮೋದನೆಗೆ ನಿರೀಕ್ಷಿಸಲಾಗಿದೆ. |
| 9 | ಕ್ಯಾಟಲಿಟಿಕ್ ಡೆವಲಪಮೆಂಟ್ ಯೋಜನೆ ಈ ಯೋಜನೆಯಡಿ ಕೈಮಗ್ಗ/ವಿದ್ಯುತ್‌ಮಗ್ಗ/ಕ್ಯಾಡ್‌ಕ್ಯಾಮ್ ಖರೀದಿಗೆ ಕೇಂದ್ರ ಸರ್ಕಾರವು ಶೇ.50 ಸಹಾಯಧನ ನೀಡಲಿದೆ. ಫಲಾನುಭವಿ ಶೇ. 25 ಭರಿಸಲಿದ್ದು, ಉಳಿಕೆ ಶೇ. 25ನ್ನು ಈ ಯೋಜನೆಯಡಿ ಸಹಾಯಧನವಾಗಿ ನೀಡಲಾಗುವುದು. |
| 10 | ವಿಶೇಷ ಅಭಿವೃದ್ಧಿ ಯೋಜನೆ (ಅತಿ ಹಿಂದುಳಿದ ಮತ್ತು ಹಿಂದುಳಿದ ತಾಲ್ಲೂಕುಗಳ ವಿದ್ಯುತ್‌ಮಗ್ಗಗಳ ವಿದ್ಯುತ್ ಸಬ್ಸಿಡಿಯನ್ನು ವಿದ್ಯುತ್ ಸರಬರಾಜು ಕಂಪೆನಿಗಳಿಗೆ ಮರುಪಾವತಿ) |

## 6. ನೇಕಾರರ ಪ್ಯಾಕೇಜ್ –ಕೆ.ಹೆಚ್.ಡಿ.ಸಿ.:–

ಉಪಯೋಜನೆಗಳು :–

 ಕಚ್ಚಾಮಾಲು ಖರೀದಿಯ ಮೇಲಿನ ಸಹಾಯಧನ:
 ಕೈಮಗ್ಗ ಬಟ್ಟೆಗಳ ಮಾರಾಟದ ಮೇಲೆ ನೀಡಿದ ಶೇ.20 ರಿಬೇಟ್ ಮರುಪಾವತಿ
 ನೇಕಾರರ ಮಿತವ್ಯಯನಿಧಿ ಯೋಜನೆಯಡಿ ಬಡ್ಡಿ
 ವಾಣಿಜ್ಯ ಬ್ಯಾಂಕುಗಳಿಂದ ದುಡಿಮೆ ಬಂಡವಾಳಕ್ಕಾಗಿ ಪಡೆದ ಸಾಲಕ್ಕೆ ಬಡ್ಡಿ ಸಹಾಯಧನ
 ವಿಶೇಷ ಘಟಕ ಯೋಜನೆ
 ಗಿರಿಜನ ಉಪಯೋಜನೆ

ಇತರೆ ಪ್ರಮುಖ ಅಂಶಗಳು :–

- ಮಿಲ್ ಗೇಟ್ ಪ್ರೈಸ್ ಯೋಜನೆ:– ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮದಿಂದ ಸಂಘ–ಸಂಸ್ಥೆಗಳು ಸ್ಥಾಪಿಸುವ ಯಾರ್ನ್ ಡಿಪೋ ಮುಖಾಂತರ ಕೈಮಗ್ಗ ನೇಕಾರರಿಗೆ ನೂಲನ್ನು ಒದಗಿಸಲಾಗುವುದು.
- ಯಾರ್ನ್ ಡಿಪೋಗಳ ನಿರ್ವಹಣಾ ವೆಚ್ಚವಾಗಿ ಶೇ. 2.5ರಷ್ಟು ಅನುದಾನವನ್ನು ಡಿಪೋಗಳನ್ನು ನಡೆಸುವ ಸಂಘ –ಸಂಸ್ಥೆಗಳು ಪಡೆಯಬಹುದಾಗಿದೆ.
- ಜಿಯೋಗ್ರಾಫಿಕಲ್ ಇಂಡಿಕೇಷನ್ ಆಕ್ಟ್ :– ಭೌಗೋಳಿಕವಾಗಿ ಪ್ರಸಿದ್ಧಿ ಹೊಂದಿರುವ ಕೈಮಗ್ಗ ಉತ್ಪನ್ನಗಳನ್ನು ಬೇರೆ ಪ್ರದೇಶದಲ್ಲಿ ನಕಲು ಮಾಡಿ ಉತ್ಪಾದನೆ ಮಾಡಲಾಗದಂತೆ ಈ ಆಕ್ಟ್‌ನಡಿ ನೊಂದಾಯಿಸಬಹುದಾಗಿರುತ್ತದೆ.ಕೇಂದ್ರ ಸರ್ಕಾರವು ಈ ಉದ್ದೇಶಕ್ಕೆ ಗರಿಷ್ಠ ರೂ.1.50 ಲಕ್ಷಗಳ ಅನುದಾನವನ್ನು ಮಂಜೂರು ಮಾಡುತ್ತದೆ. ಕರ್ನಾಟಕದಲ್ಲಿ ಈವರೆಗೆ ಮೊಳಕಾಲ್ಮೂರು ಹಾಗೂ ಇಳಕಲ್ ಸೀರೆಗಳನ್ನು ಈ ಆಕ್ಟ್‌ನಡಿ ನೊಂದಾಯಿಸಲಾಗಿರುತ್ತದೆ. ಉಡುಪಿ ಸೀರೆ ಹಾಗೂ ಗುಳೇದಗುಡ್ಡ ಖಣಗಳನ್ನು ಈ ಆಕ್ಟ್‌ನಡಿ ನೊಂದಾಯಿಸಲಾಗುತ್ತಿದೆ.

 ಕಚ್ಚಾ ಮಾಲು ಖರೀದಿಗಾಗಿ ಸಹಾಯಧನ :–

ಕರ್ನಾಟಕ ಸರ್ಕಾರವು ಈ ಉದ್ದೇಶಕ್ಕಾಗಿ ಸಹಕಾರ ಸಂಘಗಳು ಎನ್.ಹೆಚ್.ಡಿ.ಸಿ ಮೂಲಕ ಖರೀದಿಸುವ ಪ್ರತಿ ಕೆ.ಜಿ. ನೂಲಿಗೆ ರೂ.15/–ರ ಸಹಾಯಧನ ನೀಡುವ ಯೋಜನೆ ಅನುಷ್ಠಾನಗೊಳಿಸಲು ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಅನುದಾನ ನಿಗಧಿಪಡಿಸಿರುತ್ತದೆ. ಪ್ರಸ್ತಾವನೆಗಳನ್ನು ಸಹಕಾರ ಸಂಘಗಳಿಂದ ಪಡೆದು ಪರಿಶೀಲಿಸಿ ಈ ಕಛೇರಿಗೆ ಶಿಫಾರಸ್ಸು ಮಾಡಲು ಜಿಲ್ಲೆಗಳಿಗೆ ಸೂಚಿಸಲಾಗಿರುತ್ತದೆ.

## 7. ವಿದ್ಯುತ್ ಮಗ್ಗಗಳಿಗೆ ಸಹಾಯ:–

 ವಿದ್ಯುತ್ ಮಗ್ಗ ವಲಯದ ಅಭಿವೃದ್ಧಿಗಾಗಿ ಸಹಾಯ ಒದಗಿಸಲಾಗುವುದು.

## 8. ವಿದ್ಯುತ್‌ಮಗ್ಗ ಸಹಕಾರ ಸಂಘಗಳಿಗೆ ಶೇರು ಬಂಡವಾಳ ನೆರವು:–

❖ ವಿದ್ಯುತ್‌ಮಗ್ಗ ನೇಕಾರರು ಸಹಕಾರ ಸಂಘಗಳನ್ನು ಸ್ಥಾಪಿಸಿಕೊಂಡು ಆ ಮೂಲಕ ಕಚ್ಚಾ ಸಾಮಗ್ರಿಗಳನ್ನು ಖರೀದಿಸಲು ಮತ್ತು ಮಾರುಕಟ್ಟೆ ಸೌಲಭ್ಯಗಳನ್ನು ಕಲ್ಪಿಸಿಕೊಳ್ಳಲು ನೇಕಾರರಿಗೆ ನೆರವಾಗುವಂತೆ ಸಹಕಾರ ಸಂಘಗಳಿಗೆ ಶೇರು ಬಂಡವಾಳವನ್ನು ಒದಗಿಸಲಾಗುವುದು.

❖ ಈ ಸಂಘಗಳಿಗೆ ಆರ್ಥಿಕ ಸಂಸ್ಥೆಗಳ ಮೂಲಕ ದುಡಿಯುವ ಬಂಡವಾಳವನ್ನು ಪಡೆಯುವ ಸಾಮರ್ಥ್ಯವನ್ನು ಹೆಚ್ಚಿಸಲು ಶೇರು ಬಂಡವಾಳವನ್ನು ನೀಡಲಾಗುವುದು.

## 9. ವಿದ್ಯುತ್‌ಮಗ್ಗ ಸಹಕಾರ ಸಂಘಗಳಿಗೆ ಎನ್.ಸಿ.ಡಿ.ಸಿ. ಯೋಜನೆ:–

❖ ಸಹಕಾರ ಸಂಘಗಳು ವಿದ್ಯುತ್‌ಮಗ್ಗ ಘಟಕಗಳನ್ನು ಸ್ಥಾಪಿಸಲು ಎನ್.ಸಿ.ಡಿ.ಸಿ.ಯಿಂದ ಆರ್ಥಿಕ ಸೌಲಭ್ಯ ಲಭ್ಯವಿರುತ್ತದೆ. ಈ ನೆರವಿನೊಂದಿಗೆ ಈ ಸಂಘಗಳು ಈ ಕೆಳಗಿನ ಚಟುವಟಿಕೆಗಳನ್ನು ಕೈಗೊಳ್ಳಬಹುದಾಗಿದೆ.

❖ ಶೇರು ಬಂಡವಾಳ ಹೂಡಿಕೆ.

❖ ಮಗ್ಗಪೂರ್ವ ಹಾಗೂ ಮಗ್ಗ ಚಟುವಟಿಕೆಗಳು.

❖ ಸಾಮಾನ್ಯ ಕಾರ್ಯಾಗಾರ.

❖ ಆಧುನಿಕ ಮಗ್ಗಗಳು ಅಳವಡಿಸುವುದು.

❖ ಗೋಡೌನ್‌ಗಳು ಮತ್ತು ಶೋರೂಂಗಳನ್ನು ನಿರ್ಮಿಸಬಹುದಾಗಿದೆ.

## 10. (ಅ) ವಿಶೇಷ ಘಟಕ ಯೋಜನೆ :–

ಉಪ ಯೋಜನೆಗಳು:–

- ❖ ಸಾಮೂಹಿಕ ಸೌಲಭ್ಯ ಕೇಂದ್ರ
- ❖ ಕಾರ್ಯಾಗಾರ
- ❖ ಮಗ್ಗಗಳು ಮತ್ತು ಸುಧಾರಿತ ಉಪಕರಣಗಳು.
- ❖ ಕೈಮಗ್ಗಗಳು, ವಿದ್ಯುತ್ ಮಗ್ಗ (ಸಾಧಾರಣ), ಸೆಮಿ ಆಟೋ ಲೂಮ್ಸ್, ಆಟೋ ಲೂಮ್ಸ್
- ❖ ದುಡಿಮೆ ಬಂಡವಾಳ– ಕೈಮಗ್ಗ, ವಿ.ಮಗ್ಗ.
- ❖ ನೇಕಾರರ ಕಾಲೋನಿ ಅಭಿವೃದ್ಧಿ
- ❖ ಡಿ.ಜಿ.ಸೆಟ್ ಪೂರೈಕೆ
- ❖ ಮಾರುಕಟ್ಟೆ ಪ್ರೋತ್ಸಾಹ
- ❖ ಮಗ್ಗಪೂರ್ವ ಸೌಲಭ್ಯಗಳು
- ❖ ಹೊಸ ಸದಸ್ಯರಿಗೆ ಷೇರು
- ❖ ಪ್ರಾಥಮಿಕ ಷೇರು ಬಂಡವಾಳ ಹೂಡಿಕೆ

**11.** (ಇ) ಗಿರಿಜನ ಉಪಯೋಜನೆ:–

- ❖ ಉಪ ಯೋಜನೆಗಳು:–
- ❖ ಸಾಮೂಹಿಕ ಸೌಲಭ್ಯ ಕೇಂದ್ರ
- ❖ ಕಾರ್ಯಾಗಾರ
- ❖ ಮಗ್ಗಗಳು ಮತ್ತು ಸುಧಾರಿತ ಉಪಕರಣಗಳು
- ❖ ಕೈಮಗ್ಗಗಳು, ವಿದ್ಯುತ್ ಮಗ್ಗ (ಸಾಧಾರಣ), ಸೆಮಿ ಆಟೋ ಲೂಮ್ಸ್, ಆಟೋ ಲೂಮ್ಸ್
- ❖ ದುಡಿಮೆ ಬಂಡವಾಳ– ಕೈಮಗ್ಗ, ವಿ.ಮಗ್ಗ.
- ❖ ನೇಕಾರರ ಕಾಲೋನಿ ಅಭಿವೃದ್ಧಿ
- ❖ ಹೊಸ ಸದಸ್ಯರಿಗೆ ಷೇರು
- ❖ ಪ್ರಾಥಮಿಕ ಷೇರು ಬಂಡವಾಳ ಹೂಡಿಕೆ

**12.** ವಸತಿ ಕಾರ್ಯಗಾರ ಯೋಜನೆ :–

- ❖ ಸಹಾಯಧನ – ರೂ **75,000**. (ಸಾಮಾನ್ಯ)
  ರೂ **90,000**. (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ)
- ❖ ಸಾಲ – ರೂ **20,000**. (ಸಾಮಾನ್ಯ)
  ರೂ **10,000**. (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ)
- ❖ ಫಲಾನುಭವಿಯ ವಂತಿಗೆ ರೂ. **5,000**
- ❖ • ಒಟ್ಟು ಘಟಕದ ವೆಚ್ಚ ರೂ.**1,00,000**

**13.** ವಸ್ತ್ರ ಸಂಸ್ಕರಣಾ ಯೋಜನೆ :– **(Sizing Plant)**

- ❖ ನೇಕಾರರ ಬೇಡಿಕೆಗಳಿಗೆ ಅನುಗುಣವಾಗಿ ಸೈಜಿಂಗ್ ಭೀಮ್‌ಗಳನ್ನು ತಯಾರಿಸಲು ಸೈಜಿಂಗ್ ಘಟಕಗಳನ್ನು ಸ್ಥಾಪಿಸಲು ಅವಕಾಶವಿದೆ.

## ಕೇಂದ್ರ ಸರ್ಕಾರದ ಯೋಜನೆಗಳು

## ಸಮಗ್ರ ಕೈಮಗ್ಗ ಅಭಿವೃದ್ಧಿ ಯೋಜನೆ

- ಕೇಂದ್ರ ಸರ್ಕಾರವು 10ನೇ ಪಂಚವಾರ್ಷಿಕ ಯೋಜನೆಯ 4 ಯೋಜನೆಗಳನ್ನು ಒಂದುಗೂಡಿಸಿ 11 ಪಂಚವಾರ್ಷಿಕ ಯೋಜನೆಯಡಿ ಸಮಗ್ರ ಕೈಮಗ್ಗ ಅಭಿವೃದ್ಧಿ ಯೋಜನೆಯನ್ನು ರೂಪಿಸಿದೆ.
- ಮುಖ್ಯ ಗುರಿಗಳು.

➢ ಆಯ್ದ ಕೈಮಗ್ಗ ಸಮುಚ್ಚಯಗಳಲ್ಲಿ (300ರಿಂದ 500 ಮಗ್ಗಗಳು) ಕೈಮಗ್ಗ ನೇಕಾರರನು ಗಮನಾರ್ಹ ಉತ್ಪಾದನಾ ಗುಂಪುಗಳನ್ನಾಗಿ ಪರಿವರ್ತಿಸಲು ಒತ್ತು ನೀಡುವುದು.

➢ ಆಯ್ದ ಕೈಮಗ್ಗ ಗುಂಪುಗಳನ್ನು (ಕನಿಷ್ಠ 10 ನೇಕಾರರು) ಸ್ವಸಾಮರ್ಥ್ಯ ಹೊಂದಲು ಸಹಾಯ ನೀಡುವುದು.

➢ ಸಹಕಾರಿ ಮತ್ತು ಸಹಕಾರೇತರ ವಲಯದ ನೇಕಾರರನ್ನು ಈ ವ್ಯಾಪ್ತಿಗೊಳಪಡಿಸಲು ಕ್ರಮಕೈಗೊಳ್ಳುವುದು

➢ ಕ್ಲಸ್ಟರ್‌ಗಳನ್ನು ಗರಿಷ್ಠ ರೂ. 60.00 ಲಕ್ಷಗಳ ವೆಚ್ಚದಲ್ಲಿ ಹಾಗೂ ಗುಂಪುಗಳನ್ನು ಬೇಡಿಕೆ ಆಧಾರಿತ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಅವಕಾಶವಿರುತ್ತದೆ.

➢ ಈ ಯೋಜನೆಯಡಿ ಕೈಮಗ್ಗ ನೇಕಾರರಿಗೆ ತರಬೇತಿ, ಮಗ್ಗ ಮತ್ತು ಸಲಕರಣೆ, ಅಧ್ಯಯನ ಪ್ರವಾಸ, ಸಾಮಾನ್ಯ ಸೌಲಭ್ಯ ಕೇಂದ್ರಗಳು, ಡೈ ಹೌಸ್, ಯಾರ್ನ್ ಬ್ಯಾಂಕ್ ಸ್ಥಾಪನೆಗೆ ಕಾರ್ಪಸ್ ಫಂಡ್, ಮಾರುಕಟ್ಟೆ ಮತ್ತು ಪ್ರಚಾರ ಕಾರ್ಯಕ್ರಮಗಳಿಗೆ ಅನುದಾನ ಒದಗಿಸಲಾಗುವುದು.

➢ ಈ ಯೋಜನೆಯಡಿ ಈವರೆವಿಗೆ ಅಭಿವೃದ್ಧಿ ಪಡಿಸಲಾಗುತ್ತಿರುವ ಕೈಮಗ್ಗ ಕ್ಲಸ್ಟರ್‌ಗಳ ವಿವರ ಇಂತಿದೆ.

➢ ಫೇಸ್ ಬ – ನಿಡಗುಂದಿ.

 ಈ ಯೋಜನೆಯಡಿ ಕೈಮಗ್ಗ ನೇಕಾರ ಸಹಕಾರ ಸಂಘಗಳು ಹಿಂದಿನ ಮೂರು ವರ್ಷಗಳ ಅವಧಿಯಲ್ಲಿ ರಿಬೇಟ್ ಮಾರಾಟ ಹೊರತುಪಡಿಸಿ ಉಳಿದ ಮಾರಾಟದ ಸರಾಸರಿ ಮಾರಾಟದ ಶೇ.10ರ ಮೊಬಲಗನ್ನು ಮಾರುಕಟ್ಟೆ ಪ್ರೋತ್ಸಾಹನವಾಗಿ ಪಡೆಯಬಹುದಾಗಿದೆ.

ಗುಂಪು ವಿಮಾ ಯೋಜನೆ (ಮಹಾತ್ಮಗಾಂಧಿ ಬುನ್ಕರ್ ಬಿಮಾ ಯೋಜನೆ) :–

 ಕೇಂದ್ರ ಸರ್ಕಾರವು ಕೈಮಗ್ಗ ನೇಕಾರರ ಸಾಮಾಜಿಕ ಭದ್ರತೆಗಾಗಿ ಕೆ.ಹೆಚ್.ಡಿ.ಸಿ., ಸಹಕಾರ ಸಂಘಗಳು ಹಾಗೂ ಖಾಸಗಿ ವಲಯದ ನೇಕಾರರಿಗೆ ಮಹಾತ್ಮಗಾಂಧಿ ಬುನ್ಕರ್ ಬಿಮಾ ಯೋಜನೆ ಎಂಬ ಹೊಸ ಯೋಜನೆಯನ್ನು ಜಾರಿಗೆ ತಂದಿದೆ.

 ಭಾರತೀಯ ಜೀವವಿಮಾ ನಿಗಮದ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

 ಯೋಜನೆಯಡಿ 18ರಿಂದ 58 ವರ್ಷದೊಳಗಿನ ಎಲ್ಲ ಅರ್ಹ ಪುರುಷ ಮತ್ತು ಮಹಿಳಾ ನೇಕಾರರನ್ನು ನೊಂದಾಯಿಸ ಲಾಗುವುದು.

| ವಾರ್ಷಿಕ ವಂತಿಗೆ (ರೂ.ಗಳಲ್ಲಿ) | | | | |
|---|---|---|---|---|
| ಫಲಾನುಭವಿ | ರಾಜ್ಯ ಸರ್ಕಾರ | ಕೇಂದ್ರ ಸರ್ಕಾರ | ಎಲ್ ಐ ಸಿ | ಒಟ್ಟು |
| 40 | 40 | 150 | 100 | 330 |

| ಪ್ರಯೋಜನಗಳು | | | |
|---|---|---|---|
| ಸ್ವಾಭಾವಿಕಸಾವು | ಅಪಘಾತದ ಸಾವು | ಭಾಗಶ:ಅಂಗವಿಕಲತೆ | ಖಾಯಂ ಅಂಗವಿಕಲತೆ |
| 60000 | 150000 | 75000 | 150000 |

❖ ಶಿಕ್ಷಾ ಸಹಯೋಗ ಯೋಜನೆಯಡಿ ಸದಸ್ಯ ಕೈಮಗ್ಗ ನೇಕಾರರ ಇಬ್ಬರು ಮಕ್ಕಳಿಗೆ ತಲಾ ರೂ.1200 ವಿದ್ಯಾರ್ಥಿ ವೇತನವನ್ನು ನೀಡಲಾಗುವುದು.

ನೂತನ ಜವಳಿ ನೀತಿ 2013–18

- ನೂತನ ಜವಳಿ ನೀತಿ 2013–18 ರಡಿಯಲ್ಲಿ ಒಂದು ದಿನದ ಕಾರ್ಯಾಗಾರ/6 ದಿನಗಳ ಉಧ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ.

ಉದ್ದೇಶ:–

- ನೂತನ ಜವಳಿ ನೀತಿ 2013–18 ಜವಳಿ ಉದ್ದಿಮೆ ಕ್ಷೇತ್ರದ ಬೆಳವಣಿಗೆ ಹಾಗೂ ಜವಳಿ ಉದ್ದಿಮೆಗಳ ಸ್ಥಾಪನೆಗೆ ಪ್ರೋತ್ಸಾಹ, ಪ್ರಾಂತೀಯ ಬೆಳವಣಿಗೆಗಳ ಉದ್ದೇಶದಿಂದ ಉದ್ಯೋಗ ಅವಕಾಶ ಸೃಜನೆಗೆ ಜಾರಿಗೆ ತಂದಿರುತ್ತದೆ. ಸಣ್ಣ ಮತ್ತು ಮಧ್ಯಮ ಜವಳಿ ಉದ್ದಿಮೆ ಸ್ಥಾಪಿಸುವ ಉದ್ದಿಮೆದಾರರಿಗೆ ಸುವರ್ಣ ವಸ್ತ್ರ ನೀತಿಯಲ್ಲಿ ಇಲಾಖೆಯಿಂದ ದೊರಕುವ ಸೌಲಭ್ಯಗಳ ಬಗ್ಗೆ, ರಾಜ್ಯದಲ್ಲಿ

ಜವಳಿ ಉದ್ದಿಮೆಗೆ ಇರುವ ಅವಕಾಶಗಳ ಬಗ್ಗೆ ಹಾಗೂ ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಜವಳಿ ವಲಯದ ಯೋಜನೆಗಳ ಬಗ್ಗೆ ಮಾಹಿತಿ ನೀಡುವ ಉದ್ದೇಶದಿಂದ ಒಂದು ದಿನ ಇಲಾಖೆ ಕಾರ್ಯ ಕ್ರಮಗಳ ಪ್ರಚಾರ ಮತ್ತು ಕಾರ್ಯಾಗಾರ ಹಾಗೂ 6 ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ ನೀಡುವುದು.

- ಕರ್ನಾಟಕದಲ್ಲಿ ಜವಳಿ ಮತ್ತು ಸಿದ್ಧ ಉಡುಪು ಕ್ಷೇತ್ರದಲ್ಲಿ ಬಂಡವಾಳ ಆಕರ್ಷಣೆ:–

1) ಜವಳಿ ಮತ್ತು ಸಿದ್ಧ ಉಡುಪು ಕೈಗಾರಿಕೆ ಒಂದು ಒಳನೋಟ :

ಅ) ಕರ್ನಾಟಕದಲ್ಲಿ ಜವಳಿ ಕೈಗಾರಿಕೆಯು ರಾಜ್ಯದ ಒಟ್ಟು ಕೈಗಾರಿಕಾ ಉತ್ಪನ್ನದಲ್ಲಿ ಶೇಕಡ 10ರಷ್ಟು ಕಾಣಿಕೆ ನೀಡುತ್ತಿದೆ. ಒಟ್ಟು ಕೈಗಾರಿಕಾ ಉದ್ಯೋಗ ಅವಕಾಶಗಳಲ್ಲಿ ಶೇಕಡ 40ಕ್ಕಿಂತಲೂ ಹೆಚ್ಚು ಉದ್ಯೋಗ ಅವಕಾಶ ಒದಗಿಸಿದೆ.

ಆ) ಜವಳಿ ಮತ್ತು ಸಿದ್ಧ ಉಡುಪು ಕ್ಷೇತ್ರವು ಬಡ ಮತ್ತು ಅಕುಶಲ ಕಾರ್ಮಿಕರಿಗೆ ಒದಗಿಸುತ್ತಿರುವ ಉದ್ಯೋಗ ಅವಕಾಶ ಗಳನ್ನು ಗುರುತಿಸಿ, ಕರ್ನಾಟಕ ಸರ್ಕಾರವು ಸುವರ್ಣ ವಸ್ತ್ರನೀತಿ–13 ಎಂಬ ಪರಿಣಾಮಕಾರಿ ಜವಳಿ ನೀತಿಯೊಂದನ್ನು ಜಾರಿಗೆ ತಂದಿದೆ.

ಇ) ರಾಜ್ಯದ ಜವಳಿ ಮತ್ತು ಸಿದ್ಧ ಉಡುಪು ಕೈಗಾರಿಕೆಗಳಿಗೆ ವಿಶ್ವ ಮಾರುಕಟ್ಟೆಯಲ್ಲಿ ಇರುವ ಅವಕಾಶಗಳನ್ನು ಉಪಯೋಗಿ ಸಿಕೊಂಡು ಈ ಕ್ಷೇತ್ರದಲ್ಲಿ ಗಣನೀಯ ಪ್ರಮಾಣದಲ್ಲಿ ಉದ್ಯೋಗ ಅವಕಾಶಗಳನ್ನು ಸೃಷ್ಟಿಸುವುದು ಈ ನೀತಿಯ ಮೂಲ ಉದ್ದೇಶವಾಗಿದೆ.

2) ನೂತನ ಜವಳಿ ನೀತಿ 2013–18 ರಲ್ಲಿ ನೀಡಲಾಗುತ್ತಿರುವ ಪ್ರೋತ್ಸಾಹನ ಮತ್ತು ರಿಯಾಯಿತಿಗಳು:–

ಅ) ನೂತನ ಜವಳಿ ನೀತಿ 2013–18 ಕೈಮಗ್ಗ ಮತ್ತು ಜವಳಿ ಇಲಾಖೆಯ ಮೂಲಕ ಜವಳಿ ಕ್ಷೇತ್ರದ ಎಲ್ಲಾ ಚಟುವಟಿಕೆ ಗಳಿಗೆ ಸೌಲಭ್ಯಗಳನ್ನು ವಿಸ್ತರಿಸುವ ಕರ್ನಾಟಕ ಸರ್ಕಾರದ ನೀತಿಯಾಗಿದೆ.

ಆ) ಈ ನೀತಿಯನ್ನು ಜವಳಿ ವಲಯದ ಪ್ರಮುಖ ಉದ್ದಿಮೆದಾರರೊಂದಿಗೆ ಸಮಾಲೋಚಿಸಿ ನ್ಯೂನತೆಗಳನ್ನು ಸರಿಪಡಿಸಿ ರೂಪಿಸಲಾಗಿದೆ. ಈ ನೀತಿಯ ಪ್ರಮುಖಾಂಶಗಳು ಇಂತಿವೆ.

1. ಜವಳಿ ಮೌಲ್ಯ ಸರಣಿಯ ಎಲ್ಲಾ ಚಟುವಟಿಕೆಗಳ ಬಲವರ್ಧನೆ.
2. ರಾಜ್ಯದಲ್ಲಿ ಜವಳಿ ಮತ್ತು ಸಿದ್ಧ ಉಡುಪು ಕೈಗಾರಿಕೆಗಳ ಸಮಾನ ಭೌಗೋಳಿಕ ಹರಡುವಿಕೆ.
3. ಮಾನವ ಸಂಪನ್ಮೂಲ ಅಭಿವೃದ್ಧಿ.
4. ಮೂಲಭೂತ ಸೌಕರ್ಯ ಅಭಿವೃದ್ಧಿ.
5. ಮಾರುಕಟ್ಟೆ ಅಭಿವೃದ್ಧಿ ಮತ್ತು ಬ್ರಾಂಡಿಂಗ್.
6. ಸಾಂಸ್ಥಿಕ ಅಭಿವೃದ್ಧಿ.
7. ಗುಣಮಟ್ಟ ಮತ್ತು ಸ್ಥಿರತೆ.
8. ಜವಳಿ ಕ್ಷೇತ್ರದ ಸಂಪೂರ್ಣ ಮೌಲ್ಯ ಸರಣಿಯ ತಾಂತ್ರಿಕತೆ ಉನ್ನತೀಕರಣ.

ಇ) ಜವಳಿ ಮತ್ತು ಸಿದ್ಧ ಉಡುಪು ವಲಯದಲ್ಲಿ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸಲು ನೀತಿಯಲ್ಲಿನ ನಿಬಂಧನೆ ಗಳಿಗೆ ಒಳಪಟ್ಟು ಈ ಮುಂದಿನ ಪ್ರೋತ್ಸಾಹನ ಮತ್ತು ರಿಯಾಯಿತಿಗಳನ್ನು ಕೈಗಾರಿಕೆಗಳಿಗೆ ನೀಡಲಾಗುತ್ತಿದೆ. ಈ ಪ್ರೋತ್ಸಾಹನಗಳು ನೀತಿಯ ಅವಧಿಯಲ್ಲಿ ಅಂದರೆ 2013–18ರ ಅವಧಿಯಲ್ಲಿ ಜವಳಿ ಕೈಗಾರಿಕೆಗಳಿಗೆ ಲಭ್ಯವಿರುತ್ತದೆ.

1. ಸಾಲ ಆಧಾರಿತ ಬಂಡವಾಳ ಸಹಾಯಧನ
2. ಪ್ರವೇಶ ತೆರಿಗೆ ಮರುಪಾವತಿ
3. ಮುದ್ರಾಂಕ ಶುಲ್ಕ ಮರುಪಾವತಿ
4. ಕೆ.ಐ.ಎ.ಡಿ.ಬಿ./ಕೆ.ಎಸ್.ಎಸ್.ಐ.ಡಿ.ಸಿ ಮೂಲಕ ಹಂಚಿಕೆಯಾದ ಭೂಮಿಯ ಭೂವೆಚ್ಚ/ಸ್ವಾಧೀನ ವೆಚ್ಚ ಮರುಪಾವತಿ
5. ಹಸಿರು ಜವಳಿ ಪಾರ್ಕ್‌ಗಳಿಗೆ ಸಾಮಾನ್ಯ ಮೂಲಭೂತ ಸೌಕರ್ಯಗಳು
6. ವಿದ್ಯುತ್ ಸಹಾಯಧನ
7. ಸಾಮಾನ್ಯ ರಾಸಾಯಿನಿಕ ತ್ಯಾಜ್ಯ ಪರಿಷ್ಕರಣೆ ಮತ್ತು ಅಪಾಯಕಾರಿ ತ್ಯಾಜ್ಯ ವಿಲೇವಾರಿ ಸೌಲಭ್ಯ
8. ಸಾಮರ್ಥ್ಯ ನಿರ್ಮಾಣ ಬೆಂಬಲ
9. ವಿನ್ಯಾಸ ಅಭಿವೃದ್ಧಿ ಮತ್ತು ಉತ್ಪನ್ನ ವೈವಿಧ್ಯತೆ
10. ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಕೌಶಲ್ಯ ಉನ್ನತೀಕರಣ

ಸೂಚನೆ:– ಈ ಪ್ರೋತ್ಸಾಹನ ಮತ್ತು ರಿಯಾಯಿತಿಗಳನ್ನು ಜವಳಿ ಉದ್ದಿಮೆದಾರರಿಗೆ ನೀತಿಯಲ್ಲಿ ತಿಳಿಸಲಾದಂತೆ ಅವರು ಉದ್ದಿಮೆಗಳನ್ನು ಸ್ಥಾಪಿಸುವ ವಲಯಗಳಲ್ಲಿ ಅನ್ವಯವಾಗುಂತೆ ನೀಡಲಾಗುವುದು.

ಈ) ನೀತಿಯಲ್ಲಿ ಬೃಹತ್ ಕೈಗಾರಿಕೆಗಳಿಗೆ ಪ್ರತಿಯೊಂದು ಪ್ರತ್ಯೇಕ ಪ್ರಕರಣಗಳನ್ನು ವಿಶ್ಲೇಷಿಸಿ ವಿಶೇಷ ಸಹಾಯ ಸವಲತ್ತುಗಳನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದೆ. ಬೃಹತ್ ಕೈಗಾರಿಕಗಳಿಗೆ ಒದಗಿಸಬಹುದಾದ ಇಂತಹ ಸಹಾಯಗಳ ಮಾದರಿ ಪಟ್ಟಿ ಇಂತಿದೆ.

1) ಮೂಲಭೂತ ಸೌಕರ್ಯಗಳಿಗೆ ಅವಶ್ಯಕತೆಗಳಿಗನುಗುಣವಾಗಿ ಆರ್ಥಿಕ ಸಹಾಯ
2) ಕೈಗಾರಿಕೆ ಸ್ಥಾಪನೆಗೆ ಸೂಕ್ತ ಸ್ಥಳ ಗುರುತಿಸಲು ತಾಂತ್ರಿಕ ಸಹಾಯ ವಿದ್ಯುತ್ ಸಹಾಯ
3) ವಿದ್ಯುತ್ ಸಹಾಯಧನ
4) ಪ್ರವೇಶ ತೆರಿಗೆ ಸಹಾಯಧನ
5) ಮುದ್ರಾಂಕ ಶುಲ್ಕ ಸಹಾಯಧನ
6) ಕಾರ್ಮಿಕರ ಇ.ಎಸ್.ಐ ಮತ್ತು ಪಿ.ಎಫ್‌ಗಳಿಗಾಗಿ ಸಹಾಯಧನ
7) ಅವಶ್ಯಕತೆ ಆಧರಿಸಿ ಇತರೆ ಸಹಾಯಧನಗಳು

**ನೂತನ ಜವಳಿ ನೀತಿ 2013–18**

ಉದ್ದೇಶಗಳು:–

 ಪಾಲಿಸಿಯ ಅವಧಿಯಲ್ಲಿ 5 ಲಕ್ಷ ಜನರಿಗೆ ಉದ್ಯೋಗಾವಕಾಶ.
 ರೂ.10,000 ಕೋಟಿ ಬಂಡವಾಳ ಆಕರ್ಷಣೆ.
 ಜವಳಿ ಮೌಲ್ಯ ಸರಣಿಯ ಎಲ್ಲ ಚಟುವಟಿಕೆಗಳಿಗೆ ಪ್ರೋತ್ಸಾಹ.
 ಜವಳಿ ಚಟುವಟಿಕೆಗಳ ಸಮಾನ ಭೌಗೋಳಿಕ ಹರಡುವಿಕೆ.
 ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳು.
 ಉದ್ಯಮ ಮತ್ತು ಸಂಸ್ಥೆಗಳ ನಡುವಣ ಸಂಪರ್ಕ.
 ಜವಳಿ ಕೈಗಾರಿಕೆಗಳಿಗೆ ಪ್ರೋತ್ಸಾಹನ ಮತ್ತು ರಿಯಾಯ್ತಿಗಳು.

ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳು:–

- ಹಾಲಿ ಇರುವ ತರಬೇತಿ ಕೇಂದ್ರಗಳ ಬಲವರ್ಧನೆ/ನೂತನ ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪನೆಗೆ.
- ಸಿದ್ಧಉಡುಪು, ವಿದ್ಯುತ್‌ಮಗ್ಗ, ಕೈಮಗ್ಗ, ಕಸೂತಿ ಮುಂತಾದ ಜವಳಿ ಚಟುವಟಿಕೆಗಳಲ್ಲಿ ಶಿಷ್ಯವೇತನ ಸಹಿತ ತರಬೇತಿ.
- ಉದ್ಯಮ ಮತ್ತು ತರಬೇತಿ ಸಂಸ್ಥೆಗಳ ನಡುವೆ ಸಂಪರ್ಕ.

1. ಕೈಮಗ್ಗ ಮತ್ತು ಜವಳಿ ಇಲಾಖೆ ಅ) ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1957.
   ಆ) ಕರ್ನಾಟಕ ಆರ್ಥಿಕ ಸಂಹಿತಿ 1957.
   ಇ) ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1957(ಸಿ.ಸಿ.ಎ).
   ಈ) ಕೈಮಗ್ಗ ಮತ್ತು ಜವಳಿ ಕಂಪೆಂಡಿಯಂ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳ ಮಾರ್ಗಸೂಚಿ.
   ಉ) ಕರ್ನಾಟಕ ಸಹಕಾರಿ ಸಂಘಗಳ ಕಾಯಿದೆ 1959.
   ಊ) ದಿ ಮಲ್ಟಿ ಸ್ಟೇಟ್ ಕೋ.ಆಪ್. ಸೊಸೈಟೀಸ್ ಆಕ್ಟ್ 1984.
   ಋ) ದಿ ಮಲ್ಟಿ ಸ್ಟೇಟ್ ಕೋ.ಆಪ್. ಸೊಸೈಟೀಸ್ ರೂಲ್ಸ್ 1985.

## ಅಧ್ಯಾಯ 6
## ಸಾರ್ವಜನಿಕ ಪ್ರಾಧಿಕಾರದ ಸುಪರ್ದಿಯ ಅಧೀನದಲ್ಲಿರುವ ದಾಖಲೆಗಳನ್ನು ವಿಷಯವಾರು ವಿಭಾಗವಾರು ವಿಂಗಡಣೆ ಮಾಡಿಕೊಂಡಿರುವುದು.

[ಭಾಗ 4(1) (ಬಿ) V (i)]

ಸಾರ್ವಜನಿಕ ಪ್ರಾಧಿಕಾರಕ ಸುಪರ್ದಿಯ ಅಧೀನದಲ್ಲಿರುವ ದಾಖಲೆಗಳನ್ನು ವಿಷಯವಾರು/ವಿಭಾಗವಾರು ಮಾಹಿತಿಗಳನ್ನು ವಿಂಗಡಣೆ ಮಾಡಿರುವ ಅಧಿಕೃತ ದಾಖಲೆಗಳನ್ನು ಒದಗಿಸುವುದು.

.

ಎಲ್ಲಾ ದಾಖಲಾತಿಗಳ ಮಾಹಿತಿಗಳನ್ನು 4(1)(ಎ)ನಲ್ಲಿ ಒದಗಿಸಲಾಗಿದೆ.

# ಅಧ್ಯಾಯ 7
## ಸಾರ್ವಜನಿಕ ಪ್ರಾಧಿಕಾರಗಳು ಸಮಗ್ರ ನೀತಿಗಳನ್ನು ರೂಪಿಸುವುದು ಮತ್ತು ಅನುಷ್ಠಾನಗೊಳಿಸುವಲ್ಲಿ ಸಾರ್ವಜನಿಕ ಪ್ರತಿನಿಧಿಗಳ ಸಲಹೆ/ಭಾಗವಹಿಸುವಿಕೆಯನ್ನು ಕುರಿತು ಸ್ಪಷ್ಟವಾಗಿ ವಿವರಿಸುವುದು.

[ಭಾಗ 4(1)(ಬಿ)vii]

ಸಾರ್ವಜನಿಕ ಪ್ರಾಧಿಕಾರಗಳು ನೀತಿಗಳನ್ನು ರೂಪಿಸುವುದು/ಸಾರ್ವಜನಿಕರಲ್ಲಿ ಸಂಪರ್ಕವಿರುವ ಪ್ರತಿನಿಧಿಗಳ ಸಲಹೆಗಳನ್ನು ಪಡೆಯುವ ವ್ಯವಸ್ಥೆಯನ್ನು ಅಳವಡಿಸುವುದು.

| ಕ್ರ.ಸಂ. | ಕಾರ್ಯಕ್ರಮಗಳು/ಸೇವೆಗಳು | ನೀತಿಗಳನ್ನು ರೂಪಿಸುವದು ಮತ್ತು ಅನುಷ್ಠಾನಗೊಳಿಸುವಲ್ಲಿ ಸಾರ್ವಜನಿಕ ಪ್ರತಿನಿಧಿಗಳಿಂದ ಸಲಹೆಗಳನ್ನು ಪಡೆಯಲು ವ್ಯವಸ್ಥೆ ಮಾಡುವುದು. | ನೀತಿಗಳನ್ನು ರೂಪಿಸುವದು ಮತ್ತು ಅನುಷ್ಠಾನಗೊಳಿಸುವಲ್ಲಿ ಸಾರ್ವಜನಿಕ ಪ್ರತಿನಿಧಿಗಳಿಂದ ಸಲಹೆಗಳನ್ನು ಪಡೆಯಲು ವ್ಯವಸ್ಥೆ ಮಾಡುವುದು. ಕೊನೆಯ ವ್ಯಾಖ್ಯ ಅನುಷ್ಠಾನಗೊಳಿಸುವುದು. |
|---|---|---|---|
| 1 | ಆರೋಗ್ಯ ವಿಮಾ ಯೋಜನೆ (ಐ.ಸಿ.ಐ.ಸಿ.ಐ) | ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ ಬೆಂಗಳೂರು. | ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ ಬೆಂಗಳೂರು. |
| 2 | ಮಹಾತ್ಮ ಗಾಂಧಿ ಬುನ್ಕರ್ ಬಿಮಾ ಯೋಜನೆ | | |
| | ಮಹಾತ್ಮ ಗಾಂಧಿ ಬುನ್ಕರ್ ಬಿಮಾ ಶಿಕ್ಷ ಸಹಯೋಗ ಯೋಜನೆ | | |
| | ಸಮಗ್ರ ಕೈಮಗ್ಗ ಅಭಿವೃದ್ಧಿ ಯೋಜನೆ | | |
| 3 | ರಾಜ್ಯ ವಲಯ ವಸತಿ ಕಾರ್ಯಗಾರ | | |
| 4 | ನೇಕಾರರ ಮಿತವ್ಯಯ ನಿಧಿ ಯೋಜನೆ | | |
| 5 | ಜಿಲ್ಲಾ ವಲಯ ಯೋಜನೆ ಕೈಮಗ್ಗ ಉದ್ಯಮಿಗಳಿಗೆ ಸಹಾಯಧನ / ಸಹಕಾರ ಸಂಘಗಳಿಗೆ ಶೇರು ಬಂಡವಾಳ. | | |
| 6 | ಸುವರ್ಣವಸ್ತ್ರ ನೀತಿ ಯೋಜನೆಯಡಿ ಸಿದ್ದ ಉಡುಪು ತರಭೇತಿ/ ಕೌಶಲ್ಯಾಭಿವೃದ್ಧಿಕೇಂದ್ರ ಸ್ಥಾಪನೆ/ ಬಂಡವಾಳ ಹೂಡಿ ಕೆಸಹಾಯಧನ | | |
| 7 | ವಿದ್ಯುತ್ ಮಗ್ಗ ನೇಕಾರರಿಗೆ ವಿದ್ಯುತ್ ಸಬ್ಸಿಡಿ | | |
| 8 | ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ರಾಜ್ಯ ಶೇ. 20ರ ಸರ್ಕಾರದ ರೀಬೇಟ್ | | |
| 9 | ವಿದ್ಯತ್ ಮಗ್ಗ ನೇಕಾರರಿಗೆ ಗುಂಪು ವಿಮಾ ಯೋಜನೆಯಡಿ ಅಳವಡಿಕೆ (ಜನಶ್ರೀಬಿಮಾ ಯೋಜನೆ) | | |
| | ಜನಶ್ರೀ ಬಿಮಾ ಯೋಜನೆ | | |
| 10 | ವಿಶೇಷ ಘಟಕ/ ಗಿರಿಜನ ಉಪಯೋಜನೆ ಹಾಗೂ ಈ ಯೋಜನೆ ಯಡಿ ಬರುವ ಉಪ ಕಾಂಪೋನೆಂಟ್‌ಗಳು | | |
| 11 | ನೇಕಾರರಿಗೆ 02 ವಿದ್ಯುತ್ ಮಗ್ಗ ಸಹಾಯಧನ ಯೋಜನೆ | | |

# ಅಧ್ಯಾಯ 8
## ಸಾರ್ವಜನಿಕ ಪ್ರಾಧಿಕಾರದ ಭಾಗವಾರು ಮಂಡಳಿಗಳು, ಸಮಿತಿಗಳು ಮತ್ತು ಇತರೆ ಸಂಸ್ಥೆಗಳನ್ನು ದಾಖಲಿಸುವುದು.

[ಭಾಗ 4(1)(ಬಿ)v(iii)]

ಸಾರ್ವಜನಿಕ ಪ್ರಾಧಿಕಾರದ ಮಂಡಳಿಗಳು, ಸಮಿತಿಗಳು ಮತ್ತು ಇತರೆ ಸಂಸ್ಥೆಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ದಯವಿಟ್ಟು ಈ ಮುಂದೆ ತೋರಿಸಲಾದ ಸಮೂನೆಯಲ್ಲಿ ಒದಗಿಸುವುದು.

| ಕ್ರ. ಸಂ. | ಸಾರ್ವಜನಿಕ ಪ್ರಾಧಿಕಾರವು ಒಳಗೊಂಡಿರುವ ಮಂಡಳಿಗಳು, ಪರಿಷತ್‌ಗಳು, ಸಮಿತಿಗಳು ಮತ್ತು ಇತರೆ ನಿಕಾಯಗಳ ಹೆಸರು | ಯಾರನ್ನು ಒಳಗೊಂಡಿದೆ | ಅಧಿಕಾರಗಳು ಮತ್ತು ಕಾರ್ಯಗಳು | ಇವುಗಳ ಸಭೆಯ ನಡುವಳಿಗಳನ್ನು ಸಾರ್ವಜನಿಕರು ಪಡೆಯುವುದಕ್ಕೆ ಅವಕಾಶ ಇದೆಯೇ? |
|---|---|---|---|---|
| 1 | ಸಮಿತಿಗಳು<br>1. ವಸತಿ ಕಾರ್ಯಾಗಾರ ಯೋಜನೆಯಡಿ ಫಲಾನುಭವಿಗಳ ಆಯ್ಕೆ ಸಮಿತಿ.<br>2. ನೂತನ ಜವಳಿ ನೀತಿ ಯೋಜನೆಯಡಿ ಎಸ್.ಎಂ.ಒ. ತರಬೇತಿ ಫಲಾನುಭವಿಗಳ ಆಯ್ಕೆ ಸಮಿತಿ.<br>3. ನೂತನ ಜವಳಿ ನೀತಿ ಯೋಜನೆಯಡಿ ಕೌಶಲ್ಯಾಭಿವೃದ್ಧಿ ಕೇಂದ್ರ ಅನುಷ್ಠಾನ ಗೊಳಿಸಲು ಆಯ್ಕೆ ಸಮಿತಿ. | **I** 1) ಜಿಲ್ಲಾ ಮಟ್ಟದ ಅಧಿಕಾರಿಗಳು, ಕೈಮಗ್ಗ ಮತ್ತು ಜವಳಿ ಇಲಾಖೆ<br>2) ಸಮಾಜ ಕಲ್ಯಾಣ ಇಲಾಖೆಯ ಪತ್ರಿನಿಧಿ<br>3) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಪ್ರತಿನಿಧಿ<br>4) ಸಹಕಾರ ಇಲಾಖೆಯ ಪ್ರತಿನಿಧಿ<br>5) ಸಹಾಯಕ ನಿರ್ದೇಶಕರು / ಜವಳಿ ಪ್ರವರ್ದನಾಧಿಕಾರಿ/ ಜವಳಿ ತನಿಖಾಧಿಕಾರಿ<br>**II** 1) ಜಿಲ್ಲಾ ಮಟ್ಟದ ಅಧಿಕಾರಿಗಳು, ಕೈಮಗ್ಗ ಮತ್ತು ಜವಳಿ ಇಲಾಖೆ<br>2) ಸಮಾಜ ಕಲ್ಯಾಣ ಇಲಾಖೆಯ ಪತ್ರಿನಿಧಿ<br>3) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಪ್ರತಿನಿಧಿ<br>4) ಉದ್ಯೋಗ ತರಬೇತಿ ಇಲಾಖೆಯ ಪ್ರತಿನಿಧಿ<br>5) ಸಹಾಯಕ ನಿರ್ದೇಶಕರು / ಜವಳಿ ಪ್ರವರ್ದನಾಧಿಕಾರಿ/ ಜವಳಿ ತನಿಖಾಧಿಕಾರಿ | ಅಧ್ಯಕ್ಷರು<br>ಸದಸ್ಯರು<br>ಸದಸ್ಯರು<br>ಸದಸ್ಯರು<br>ಸದಸ್ಯ ಕಾರ್ಯದರ್ಶಿ<br>ಅಧ್ಯಕ್ಷರು<br>ಸದಸ್ಯರು<br>ಸದಸ್ಯರು<br>ಸದಸ್ಯರು<br>ಸದಸ್ಯ ಕಾರ್ಯದರ್ಶಿ | ಇದೆ<br>ಇದೆ |

## ಅಧ್ಯಾಯ – 9

## ಅಧಿಕಾರಿಗಳು ಮತ್ತು ನೌಕಕರ ನಿರ್ದೇಷಿಕೆ (Directory)

## [Section 4(1)(b)(ix)]

ವಿವಿಧ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು ಮತ್ತು ನೌಕರರ ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್

| ಕ್ರ ಸಂ. | ಅಧಿಕಾರಿಗಳ ಹೆಸರು | ಪದನಾಮ /ಹುದ್ದೆ | ಕಛೇರಿ ವಿಳಾಸ | ಸಂಪರ್ಕಿಸುವ ಸಂಖ್ಯೆ / ಇ–ಮೇಲ್ |
|---|---|---|---|---|
| 1 | ಶ್ರೀ ದಯಾನಂದ ಕೆ. ಪಿ. | ಸಹಾಯಕ ನಿರ್ದೇಶಕರು (ಪ್ರಭಾರ) | ಸಹಾಯಕ ನಿರ್ದೇಶಕರ ಕಛೇರಿ ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ ಎಮ್. ಜಿ. ರೋಡ್ ಉತ್ತರ ಕನ್ನಡ ಕಾರವಾರ | 08382–220930 htadkarwar@gmail.com |
| 2 | ಶ್ರೀ ದಯಾನಂದ ಕೆ. ಪಿ. | ಜವಳಿ ಪ್ರವರ್ಧನಾಧಿಕಾರಿ | | 08382–220930 htadkarwar@gmail.com |

## ಅಧ್ಯಾಯ–10

**ಸಾರ್ವಜನಿಕ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಮತ್ತು ನೌಕರರ ಕಾಯ್ದೆ ನಿಯಮನುಸಾರವಾಗಿ ಮಾಸಿಕ ವೇತನ, ಇತರೆ ಪರಿಹಾರ ಭತ್ಯೆಗಳು ಸೇರಿದಂತೆ [ಭಾಗ 4(1) (ಬಿ)ಥ)]**

**ಸಾರ್ವಜನಿಕ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ನೌಕರರು ಪಡೆಯುತ್ತಿರುವ ಮಾಸಿಕ ವೇತನ, ಇತರೆ ಪರಿಹಾರ ಭತ್ಯೆಗಳು ಮಾಹಿತಿಗಳನ್ನು ಒದಗಿಸುವುದು**

| ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಮತ್ತು ನೌಕರರ ಹೆಸರು | ಹುದ್ದೆ<br>ಸಂಸ್ಥೆಯ ವಿಭಾಗದ ವಿವರ | ಮಾಸಿಕ ವೇತನ (ರೂ.ಗಳಲ್ಲಿ) |
|---|---|---|
| ಶ್ರೀ ದಯಾನಂದ ಕೆ. ಪಿ. | ಜವಳಿ ಪ್ರವರ್ಧನಾಧಿಕಾರಿ | 35397 |

## ಅಧ್ಯಾಯ–11

## [ಭಾಗ 4(1)(ಬಿ)xi]

## ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು, ಇತರೆ ಕಾರ್ಯಕ್ರಮಗಳ ಸಂಪೂರ್ಣ ಮಾಹಿತಿಯನ್ನು ನೀಡುವುದು

**1. ಸಿದ್ದ ಉಡುಪು ವಲಯದಲ್ಲಿ ಉದ್ಯೋಗ ಸೃಜನೆ ಯೋಜನೆ ನೂತನ ಜವಳಿ ನೀತಿ 2013–18): ರಾಜ್ಯದಲ್ಲಿ ಜವಳಿ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರವು ನೂತನ ಜವಳಿ ನೀತಿ 2008–13 ನ್ನು ಸರ್ಕಾರದ ಆದೇಶ ಸಂಖ್ಯೆ: ವಾಕೈ/44/ ಜಕೈಯೋ/2012, ದಿನಾಂಕ:31–10–2013ರನ್ವಯ ಘೋಷಿಸಿದೆ.**

**5. ನೂತನ ಜವಳಿ ನೀತಿ ತರಬೇತಿ ಕಾರ್ಯಕ್ರಮ:**

| ಕ್ರ. ಸಂ. | ವರ್ಷ | ಹಂಚಿಕೆಯಾದ ಅನುದಾನ | ಬಿಡುಗಡೆಯಾದ ಅನುದಾನ | ಖರ್ಚಾದ ಅನುದಾನ |
|---|---|---|---|---|
| 1 | 2017–18 | 16.08 | 16.08 | 5.25 |

**6. ಜಿಲ್ಲಾ ವಲಯ ಯೋಜನೆ:**

**ಅ) ಕೈಮಗ್ಗ ಉದ್ದಿಮೆಗಳಿಗೆ ಸಹಾಯ**

2016–17ನೇ ಸಾಲಿನ ವರೆಗೆ ಜಿಲ್ಲಾ ವಲಯ ಯೋಜನೆಯಲ್ಲಿ ಕೈಮಗ್ಗ ಉದ್ದಿಮೆಗಳಿಗೆ ಸಹಾಯ, ಷೇರು ಬಂಡವಾಳ ಹೂಡಿಕೆ ಹಾಗೂ ವಿದ್ಯುತ್ ಮಗ್ಗ ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯ ಕಾರ್ಯಕ್ರಮದಲ್ಲಿ ಈ ಜಿಲ್ಲೆಯಲ್ಲಿ ನೇಕಾರರ ಸಹಕಾರ ಸಂಘಗಳಿಗೆ ಆರ್ಥಿಕ ಸಹಾಯ ಮಂಜೂರು ಮಾಡಲು ಅವಕಾಶವಿದ್ದು, ಇದರಂತೆ ಮಾಹಿತಿ ಈ ಮುಂದಿನಂತಿದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ವರ್ಷ | ಹಂಚಿಕೆಯಾದ ಅನುದಾನ | ಬಿಡುಗಡೆಯಾದ ಅನುದಾನ | ಖರ್ಚಾದ ಅನುದಾನ |
|---|---|---|---|---|
| 1 | 2017–18 | 5.00 | 5.00 | 5.00 |

## ಅಧ್ಯಾಯ–12

## ಅನುಸರಿಸಬೇಕಾದ ರೀತಿ–ನಿಯಮಗಳು

## ಸಾರ್ವಜನಿಕ ಪ್ರಾಧಿಕಾರವು ಜನೋಪಯುಕ್ತ ಕಾರ್ಯಕ್ರಮಗಳ ನಿರ್ವಹಣೆಯಲ್ಲಿ

[ಭಾಗ 4(1)(ಬಿ)xii]

## ಸಾರ್ವಜನಿಕ ಪ್ರಾಧಿಕಾರ ಮುಖಾಂತರ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು/ಚಟುವಟಿಕೆಗಳು, ಯೋಜನೆಗಳಿಗೆ ನೀಡುವ ಸಹಾಯಧನ ಕುರಿತು ಸ್ಪಷ್ಟವಾದ ವಿವರಗಳನ್ನು ನೀಡುವುದು.

ಸಾರ್ವಜನಿಕ ಪ್ರಾಧಿಕಾರದಿಂದ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳಲ್ಲಿ ಸಹಾಯಧನ ಪಡೆಯಲು ಅರ್ಹತೆ, ಸ್ವರೂಪ, ಯಾವ ಅಧಿಕಾರಿಗಳಿಂದ ಅನುಷ್ಠಾನಗೊಳ್ಳುತ್ತಿದೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಅನುಸರಿಸಬೇಕಾದ ನಿಯಮಗಳನ್ನು ತಿಳಿಸುವುದು.

| ಕ್ರ. ಸಂ. | ಕಾರ್ಯಕ್ರಮ/ ಚಟುವಟಿಕೆಯ ಹೆಸರು. | ಸಹಾಯಧನದ ಸ್ವರೂಪ ಮತ್ತು ಪ್ರಮಾಣ | ಸಹಾಯಧನ ನೀಡಲು ಅರ್ಹತಾ ಮಾನದಂಡಗಳು | ಸಹಾಯಧನ ಮಂಜೂರು ಮಾಡುವ |
|---|---|---|---|---|

| | | | | |
|---|---|---|---|---|
| 1 | ಸಮಗ್ರ ಕೈಮಗ್ಗ ಅಭಿವೃದ್ಧಿ ಯೋಜನೆ | | ಕೈಮಗ್ಗ ನೇಕಾರರಿಗೆ ಮಾತ್ರ | ಅಭಿವೃದ್ಧಿಆಯುಕ್ತರು (ಕೈಮಗ್ಗ,) ಜವಳಿ ಮಂತ್ರಾಲಯ, ಭಾರತ ಸರ್ಕಾರ ಹಾಗೂ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು. |
| 2 | ರಾಜ್ಯ ವಲಯ ವಸತಿ ಕಾರ್ಯಗಾರ | ಸಾಮಾನ್ಯ ಘಟಕ ವೆಚ್ಚ ರೂ. 1,00,000/– (ಸಹಾಯಧನ– ರೂ.75,000) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಘಟಕ ವೆಚ್ಚ ರೂ. 1,00,000/– (ಸಹಾಯಧನ ರೂ.90000) | 1) ಕರ್ನಾಟಕ ರಾಜ್ಯ ನಿವಾಸಿ ಯಾಗಿರಬೇಕು.<br>2) ಕೈಮಗ್ಗ/ವಿದ್ಯುತ್ ಮಗ್ಗ/ಮಗ್ಗ ಪೂರ್ವ ಚಟುವಟಿಕೆಗಳಲ್ಲಿ ನಿರತರಾಗಿರಬೇಕು.<br>3) ವಸತಿ ರಹಿತರಾಗಿದ್ದು, ಸ್ವಂತ ನಿವೇಶನ ಹೊಂದಿರಬೇಕು<br>4) ಕೇಂದ್ರಸರ್ಕಾರ/ ರಾಜ್ಯ ಸರ್ಕಾರ / ಜಿಲ್ಲಾ ವಲಯ ಯೋಜನೆಗಳಡಿ ಈ ಹಿಂದೆ ಯಾವುದೇ ವಸತಿ ಸೌಲಭ್ಯವನ್ನು ಪಡೆದಿರಬಾರದು.<br>5) 18 ವರ್ಷ ಮೇಲ್ಪಟ್ಟಿರಬೇಕು<br>6) ಒಂದೇ ಕುಟುಂಬದಲ್ಲಿ ವಾಸ ವಾಗಿರುವ ಗಂಡ/ಹೆಂಡತಿ | ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು |
| 3 | ಜಿಲ್ಲಾ ವಲಯ ಯೋಜನೆ ಕೈಮಗ್ಗ ಉದ್ಯಮಿಗಳಿಗೆ ಸಹಾಯಧನ/ಸಹಕಾರ ಸಂಘಗಳಿಗೆ ಶೇರು ಬಂಡವಾಳ. | ಸಹಾಯಧನ 100% | ನೇಕಾರ ಸಹಕಾರ ಸಂಘದ ನೋಂದಾಯಿತ ಸದಸ್ಯರಿಗೆ ಮಾತ್ರ | ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಉತ್ತರ ಕನ್ನಡ ಕಾರವಾರ |
| 4 | ಸುವರ್ಣವಸ್ತ್ರ ನೀತಿ ಯೋಜನೆಯಡಿ ಸಿದ್ದ ಉಡುಪು ತರಬೇತಿ/ ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪನೆ/ಬಂಡವಾಳ ಹೂಡಿಕೆ ಸಹಾಯಧನ. | 15%ರಿಂದ 25%ರಷ್ಟು ಸಹಾಯಧನ. | ನಿರುದ್ಯೋಗಿ ಯುವಕ/ ಯುವತಿಯರು, ನೋಂದಾಯಿತ (ಜವಳಿ ಕ್ಷೇತ್ರದಲ್ಲಿ) ಸಂಘ ಸಂಸ್ಥೆಗಳು | ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು |
| 5 | ವಿದ್ಯುತ್‌ಮಗ್ಗ ನೇಕಾರರಿಗೆ ವಿದ್ಯುತ್ ಸಬ್ಸಿಡಿ | ಪ್ರತಿ ಯೂನಿಟ್‌ಗೆ 1.25 ಹೊರತುಪಡಿಸಿ ಉಳಿದ ಮೊತ್ತ ಸಹಾಯಧನ. | ವಿದ್ಯುತ್ ಮಗ್ಗ ನೇಕಾರರಿಗೆ ಮಾತ್ರ | |
| 6 | ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ರಾಜ್ಯ ಶೇ.20ರ ಸರ್ಕಾರದ ರಿಬೇಟ್ | ಸಹಕಾರ ಸಂಘಗಳು ಮಾರಾಟ ಮಾಡಿದ ಕೈಮಗ್ಗ ಉತ್ಪನ್ನಗಳ ಮಾರಾಟದ ಒಟ್ಟು ಮೌಲ್ಯದ 20% ಸಹಾಯಧನ. | ಕೈಮಗ್ಗ ನೇಕಾರ ಸಹಕಾರ ಸಂಘಗಳಿಗೆ ಮಾತ್ರ | |

| | | | | |
|---|---|---|---|---|
| | ವಿಶೇಷ ಘಟಕ/ ಗಿರಿಜನ ಉಪಯೋಜನೆ ಹಾಗೂ ಈ ಯೋಜನೆಯಡಿ ಬರುವ ಬೇರೆ ಬೇರೆ ಕಾಂಪೋನೆಂಟ್‌ಗಳು | ಘಟಕ ವೆಚ್ಚದ ಗರಿಷ್ಠ ಶೇ. 90ರಷ್ಟು ಸಹಾಯಧನ. | ಈ ಯೋಜನೆಯಡಿ ಬರುವ ಎಲ್ಲಾ ಸೌಲಭ್ಯಗಳಿಗೆ<br>1. ಕರ್ನಾಟಕ ರಾಜ್ಯದಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ/ ಪಂಗಡದ ಫಲಾನುಭವಿಗಳು.<br>2. ಅಸಂಘಟಿತ ವಲಯ/ ಕರ್ನಾಟಕ ರಾಜ್ಯದಲ್ಲಿರುವಮತ್ತು ನಿಯಮಾನುಸಾರನೋಂದಾಯಿತ ಪರಿಶಿಷ್ಟ ಜಾತಿ/ ಪಂಗಡದ, ಕೈಮಗ್ಗ/ವಿದ್ಯುತ್ ಮಗ್ಗ ನೇಕಾರರ ಸಹಕಾರ ಸಂಘ,ವಿವಿದ್ದೋದ್ದೇಶ ಗಳ /ಸ್ವಯಂ ಸೇವಾ/ಮಹಿಳಾ ಸೇವಾ/ ಸರ್ಕಾರೇತರ ಸಹಕಾರ ಸಂಘ ಸಂಸ್ಥೆಗಳು.<br>3. ಕರ್ನಾಟಕ ಸಹಕಾರಸಂಘಗಳ ಕಾಯ್ದೆ ಮತ್ತು ನಿಯಮಗಳನ್ವಯ ನೋಂದಾಯಿಸಿರುವ ನೂರಕ್ಕೆ ನೂರರಷ್ಟು ಪರಿಶಿಷ್ಟ ಜಾತಿ/ ಪಂಗಡದ ಸದಸ್ಯರನ್ನು ಹೊಂದಿ ರುವ ಮತ್ತು ಅವರ ಹಿತರಕ್ಷಣೆ/ ಕಲ್ಯಾಣಕ್ಕಾಗಿ ಸ್ಥಾಪಿಸಿರುವ ಸಂಘ–ಸಂಸ್ಥೆಗಳಿಗೆ ಮಾತ್ರ ನೀಡತಕ್ಕದ್ದು.<br>4. ಈ ಯೋಜನೆಯಡಿ ಬರುವ ಎಲ್ಲಾ ಸೌಲಭ್ಯಗಳನ್ನು ಒಂದು ಫಲಾನುಭವಿಗೆ ಒಂದು ಸಲ ಮಾತ್ರ ನೀಡಬಹುದು.<br>5. ಕೈಮಗ್ಗ ಅಥವಾ ವಿದ್ಯುತ್ ಚಾಲಿತ ಮಗ್ಗಗಳಲ್ಲಿ/ಮಗ್ಗಪೂರ್ವ ಚಟುವಟಿಕೆಗಳಲ್ಲಿನಿರತರಾಗಿರಬೇಕು<br>6. ಸರ್ಕಾರದ ಇತರೆ ಯಾವುದೇ ಯೋಜನೆಗಳಲ್ಲಿ ಈ ಸೌಲಭ್ಯ ಪಡೆದಿರಬಾರದು | |

**ಅಧ್ಯಾಯ– 13**
**ಸಾರ್ವಜನಿಕ ಪ್ರಾಧಿಕಾರದಿಂದ ನೀಡಿರುವ ರಿಯಾಯ್ತಿಗಳು ಅನುಮತಿ ಪತ್ರಗಳು ಮತ್ತು ಅಧಿಕಾರಿ ಪತ್ರಗಳನ್ನು ಪಡೆಯುವ ವಿವರಗಳು.**
**[ಭಾಗ 4(1) (ಬಿ)13]**
**ಪ್ರತಿಯೊಂದು ಕಾರ್ಯಕ್ರಮ/ಯೋಜನೆಗೆ ಸಂಬಂಧಿಸಿದಂತೆ ಫಲಾನುಭವಿಗಳ ಹೆಸರು ಮತ್ತು ವಿಳಾಸಗಳನ್ನು ಕೆಳಕಂಡ ನಮೂನೆಯಲ್ಲಿ ನೀಡಬೇಕು.**
**ಜಿಲ್ಲಾ ವಲಯ ಯೋಜನೆ (ರೂ.ಲಕ್ಷಗಳಲ್ಲಿ)**

| ಕ್ರ. ಸಂ. | ವರ್ಷ | ಸಂಘದ ಹೆಸರು | ಭೌತಿಕ | ಮೊತ್ತ |
|---|---|---|---|---|
| 1 | 2017–18 | ಶ್ರೀ ವೀರಭದ್ರೇಶ್ವರ ಕೈಮಗ್ಗ ನೇಕಾರರ ಸಹಕಾರಿ ಸಂಘ ನಿ., ಯಲ್ಲಾಪುರ. | 1 | 2.50 |
| 2 | 2017–18 | ಜೀವನ್ಮುಖಿ ಕೈಮಗ್ಗ ನೇಕಾರರ ಹಾಗೂ ಸಿದ್ಧ ಉಡುಪು ಉತ್ಪಾದನೆ ಮತ್ತು ಮಾರಾಟ ಸಹಕಾರಿ ಸಂಘ ನಿ.,ಮೂಡ್ಕಣಿ, ಹೊನ್ನಾವರ | 1 | 2.50 |

**2017–18ನೇ ಸಾಲಿನ ನೂತನ ಜವಳಿ ನೀತಿ ಯೋಜನೆಯಲ್ಲಿ ತರಬೇತಿ ಸಂಸ್ಥೆವಾರು ವೆಚ್ಚ ಮಾಡಿರುವ ವಿವರಗಳು (ದಿ:31–03–2018ರ ಅಂತ್ಯಕ್ಕೆ)**

| ಕ್ರ. ಸಂ. | ಸಂಸ್ಥೆಯ ಹೆಸರು | ತರಬೇತಿ ಕಾರ್ಯಕ್ರಮ | ಭೌತಿಕ | ಆರ್ಥಿಕ |
|---|---|---|---|---|
| 1 | ಪ್ರಗತಿ ವನಿತಾ ಸಮಾಜ (ರಿ) ಕೌಶಾಲ್ಯಾಭಿವೃದ್ಧಿ ಕೇಂದ್ರ ಕಣಗೀಲ್, ಅಂಕೋಲಾ | ಸಿವಿಂಗ್ ಮಷಿನ್ ಆಪರೇಟರ್ ತರಬೇತಿ | 50 | 1.625 |
| 2 | ನೈಸ್ ಟೆಕ್ನಿಕಲ್ ಟ್ರೈನಿಂಗ್ ಸಂಸ್ಥೆ, ಗಾರ್ಡನ್ ಸರ್ಕಲ್, ಸಿದ್ಧಾಪುರ | ಸಿವಿಂಗ್ ಮಷಿನ್ ಆಪರೇಟರ್ ತರಬೇತಿ | 50 | 1.8125 |
| 4 | ಶ್ರೀ ವೀರಭದ್ರೇಶ್ವರ ಕೈಮಗ್ಗ ನೇಕಾರರ ಸಹಕಾರಿ ಸಂಘ ನಿ., ಬಸ್‌ಸ್ಟ್ಯಾಂಡ ರೋಡ, ಯಲ್ಲಾಪುರ | ಸಿವಿಂಗ್ ಮಷಿನ್ ಆಪರೇಟರ್ ತರಬೇತಿ | 53 | 1.8125 |

## 4(1)(ಬಿ) (XIV) : ಕೈಮಗ್ಗ ಮತ್ತು ಜವಳಿ ಇಲಾಖೆಯ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಅಳವಡಿಸುವ ಬಗ್ಗೆ.

ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಕೈಮಗ್ಗ ಮತ್ತು ವಿದ್ಯುತ್‌ಮಗ್ಗ ನೇಕಾರರಾಗಿ ಅನುಷ್ಠಾನಗೊಳಿಸ ಲಾಗುತ್ತಿರುವ ವಿವಿಧ ಯೋಜನೆಗಳು ಹಾಗೂ ಅಭಿವೃದ್ದಿ ಕಾರ್ಯಗಳ ಮಾಹಿತಿಯನ್ನು ಗಣಕೀಕರಣಗೊಳಿಸಿ ವೆಬ್‌ಸೈಟ್‌ನಲ್ಲಿ ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ.

**ವೆಬ್ ಸೈಟ್ ವಿಳಾಸ:** htadkarwar@gmail.com

## 4(1)(ಬಿ) (XV) : ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ಮಾಹಿತಿಯನ್ನು ಪಡೆಯುವುದಕ್ಕಾಗಿ ನಾಗರೀಕರಿಗೆ ದೊರೆಯಬಹುದಾದ ಅನುಕೂಲತೆಗಳ ವಿವರ

ಕೈಮಗ್ಗ ಜವಳಿ ಇಲಾಖೆಯ ಕೇಂದ್ರ ಹಾಗೂ ಜಿಲ್ಲಾ ಮಟ್ಟದ ಕಛೇರಿಗಳಲ್ಲಿ ಸಾರ್ವಜನಿಕ ಕುಂದುಕೊರತೆ ವಿಭಾಗವನ್ನು ತೆರೆಯಲಾಗಿದೆ. ಕುಂದು ಕೊರತೆಗಳ ನಿವಾರಣೆ ಬಗ್ಗೆ ಅಗತ್ಯ ಮಾಹಿತಿಯನ್ನು ನೀಡಲಾಗುತ್ತಿದೆ ಹಾಗೂ ಸೂಕ್ತ ಹಿಂಬರಹಗಳನ್ನು ಸಹಾ ನೀಡಲಾಗುತ್ತಿದೆ. ಮಾಹಿತಿಗಳನ್ನು ಪಡೆಯಲು ಮಾಹಿತಿ ಹಕ್ಕು ಅಧಿ ನಿಯಮ 2005ರಂತೆ ಇಲಾಖೆಯ ಕೇಂದ್ರ ಕಛೇರಿ ಹಾಗೂ ಜಿಲ್ಲಾ ಮಟ್ಟದ ಕಛೇರಿಗಳಲ್ಲಿ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಸಹಾಯಕ ಸಾರ್ವಜನಿಕ ಅಧಿಕಾರಿ ಹಾಗೂ ಜವಳಿ ಅಭಿವೃದ್ದಿ ಆಯುಕ್ತರವರನ್ನು ಮೇಲ್ಮನ ವಿಪ್ರಾಧಿಕಾರ ಅಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ.

## ಅಧ್ಯಾಯ– 16

## ಸಾರ್ವಜನಿಕ ಪ್ರಾಧಿಕಾರ ಅಧಿಕಾರಿಯ ಹೆಸರು ಪದನಾಮ

[Section 4(1)(b)xvi]

Please provide contact information about the public information officers and assistant public information officers designated for various offices/administrative units and appellate authority/officer(s) for the public authority in the following format.

ಸಾರ್ವಜನಿಕ ಮಾಹಿತಿ ಅಧಿಕಾರಿ

| ಕ್ರ. ಸಂ. | ಕಛೇರಿಯ ಹೆಸರು/ಆಡಳಿತ ಶಾಖೆ | ಹೆಸರು ಮತ್ತು ಪದನಾಮ | ಕಛೇರಿಯ ಫೋನ್ ನಂ. | ಇ– ಮೇಲ್ |
|---|---|---|---|---|
| 1 | ಸಹಾಯಕ ನಿರ್ದೇಶಕರ ಕಛೇರಿ ಕೈಮಗ್ಗ ಮತ್ತು ಜವಳಿ ಇಲಾಖೆ ಜಿಲ್ಲಾ ಪಂಚಾಯತ್,ಉತ್ತರ ಕನ್ನಡ ಕಾರವಾರ | ಶ್ರೀ ದಯಾನಂದ ಕೆ. ಪಿ. ಸಹಾಯಕ ನಿರ್ದೇಶಕರು (ಪ್ರಭಾರ) | 08382–220930 | htadkarwar@gmail.com |

**ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ**

| Sl. No. | Name of the Office /administrative Unit | Name of Designation of APIO | Office Tel. Residence Tel. Fax | E-mail |
|---|---|---|---|---|
| 1 | Department of Handlooms and textiles, zilla panchayat, Uttar kannada Karwar | Dayanand K. P. Textile Promotional Officer | 08382–220930 | htadkarwar@gmail.com |

**Appellate Authority**

| Sl. No. | Name of the Office /administrative Unit | Name of Designation of PIO | Office Tel. Residence Tel. Fax | E-mail |
|---|---|---|---|---|
| 1 | O/o Commissioner for Textiles and Director of Handlooms and textiles, Bangalore | Joint Director, Dept. of Handlooms & Textiles, Belagavi | 080–22278223 | jdtexgok@gmail.com |

## ಅಧ್ಯಾಯ– 17

## Other useful information

## [Section 4(1)(b) xvii]

Please give below any other information or details of publications which are of relevance or of use to the citizens.